# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966

(ಕರ್ನಾಟಕ ರಾಜ್ಯಪತ್ರ, ಗುರುವಾರ, ಏಪ್ರಿಲ್ 27, 2006, ಭಾಗ – IVಎ, ಪುಟ 580 ರಿಂದ 605ರ ವರೆಗೆ ಪ್ರಕಟಿಸಲಾಗಿದೆ.)

## ಪ್ರಕರಣಗಳ ಅನುಕ್ರಮಣಿಕೆ

ಪ್ರಕರಣಗಳು

### ಅಧ್ಯಾಯ – I


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು


### ಅಧ್ಯಾಯ – II
### ಕೈಗಾರಿಕಾ ಪ್ರದೇಶಗಳು


3. ಕೈಗಾರಿಕಾ ಪ್ರದೇಶಗಳ ಘೋಷಣೆ
4. ಕೈಗಾರಿಕಾ ಪ್ರದೇಶಗಳನ್ನು ವ್ಯತ್ಯಾಸಗೊಳಿಸುವುದು


### ಅಧ್ಯಾಯ – III
### ಮಂಡಳಿಯ ಸ್ಥಾಪನೆ ಮತ್ತು ರಚನೆ


5. ಸ್ಥಾಪನೆ ಮತ್ತು ನಿಗಮನಗೊಳಿಸುವುದು
6. ರಚನೆ
7. ಸದಸ್ಯರ ಪದಾವಧಿ ಮತ್ತು ಸೇವೆಯ ಷರತ್ತುಗಳು
8. ಮಂಡಳಿಯ ಸಭೆಗಳು
9. [XXX]
10. [XXX]
11. ಮಂಡಳಿಯ ನೌಕರರು
12. ವ್ಯವಹರಣೆಗಳ ಸಿಂಧುತ್ವದ ಉಳಿಸುವಿಕೆಗಳು


### ಅಧ್ಯಾಯ – IV
### ಮಂಡಳಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳು


13. ಪ್ರಕಾರ್ಯಗಳು
14. ಮಂಡಳಿಯ ಸಾಮಾನ್ಯ ಅಧಿಕಾರಗಳು
15. ಮಂಡಳಿಯ ಆದೇಶಗಳು ಮತ್ತು ದಸ್ತಾವೇಜುಗಳ ಅಧಿಪ್ರಮಾಣನ
16. [xxx]
17. ರಾಜ್ಯ ಸರ್ಕಾರದಿಂದ ನಿರ್ದೇಶನಗಳು


### ಅಧ್ಯಾಯ – V
### ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ


18. ಮಂಡಳಿಯ ಆಸ್ತಿಗಳ ವಿನಿಯೋಗ
19. ಮಂಡಳಿಯ ನಿಧಿ
20. ಸಾಲ ಪಡೆಯಲು ಮಂಡಳಿಗಿರುವ ಅಧಿಕಾರ
21. ಠೇವಣಿಗಳು
22. ಆಯವ್ಯಯ ಮತ್ತು ಕಾಮಗಾರಿಗಳ ಯೋಜನೆ
23. ನಿಧಿಗಳಿಂದ ವೆಚ್ಚ
24. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

## ಅಧ್ಯಾಯ – VI

**ಮಂಡಳಿಯ ಆವರಣಗಳಿಗೆ, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974 ನ್ನು ಅನ್ವಯಿಸುವುದು ಮತ್ತು ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ, 1961ನ್ನು ಅನ್ವಯಿಸದಿರುವುದು.**


25. ಮಂಡಳಿಯ ಆವರಣಗಳಿಗೆ 1974ರ ಕರ್ನಾಟಕ ಅಧಿನಿಯಮ ಸಂಖ್ಯೆ 32 ನ್ನು ಅನ್ವಯಿಸುವುದು

26. ಮಂಡಳಿಯ ಆವರಣಗಳಿಗೆ 1961ರ ಕರ್ನಾಟಕ ಅಧಿನಿಯಮ 22 ನ್ನು ಅನ್ವಯಿಸದಿರುವುದು


## ಅಧ್ಯಾಯ – VII

**ಭೂಮಿಯ ಸ್ವಾಧೀನ ಮತ್ತು ವಿಲೆ**


27. ಅನ್ವಯ

28. ಭೂ ಸ್ವಾಧೀನ

29. ನಷ್ಟ ಪರಿಹಾರ

30. 2013ರ ಕೇಂದ್ರಾಧಿನಿಯಮ 30 ರ ಅನ್ವಯ

31. ರಾಜ್ಯ ಸರ್ಕಾರದಿಂದ ಅಧಿಕಾರಗಳ ಪ್ರತ್ಯಾಯೋಜನೆ


## ಅಧ್ಯಾಯ – VIII

**ಪೂರಕ ಮತ್ತು ಸಂಕೀರ್ಣ ಉಪಬಂಧಗಳು**


32. ಸರ್ಕಾರಿ ಭೂಮಿಗಳು

33. ಕೈಗಾರಿಕಾ ಪ್ರದೇಶದಲ್ಲಿನ ಭೂಮಿಯ ಮಾಲೀಕನಿಂದಾದ ಕೆಲವು ತಪ್ಪಿತಗಳ ಸಂದರ್ಭದಲ್ಲಿ ಮಂಡಳಿಯ ಅಧಿಕಾರಗಳು

34. ಹಿಡುವಳಿಯ ನಿಬಂಧನೆಗಳಿಗೆ ವಿರುದ್ಧವಾಗಿ ಭೂಮಿ ಮತ್ತು ಕಟ್ಟಡಗಳ ನಿರ್ಮಾಣಕ್ಕಾಗಿ ಅಥವಾ ಬಳಕೆಗಾಗಿ ದಂಡ

34ಎ. ಅನಧಿಕೃತ ನಿರ್ಮಾಣವನ್ನು ಅಥವಾ ಮಾರ್ಪಾಟನ್ನು ಕೆಡಹುವುದು ಅಥವಾ ಮಾರ್ಪಾಟು ಮಾಡುವುದು

34ಬಿ. ಅಧಿಕಾರವಿಲ್ಲದೆ ಗುತ್ತಿಗೆಯ ಅಥವಾ ಹಿಡುವಳಿಯ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ವಾಸದ ಮನೆಗಳೂ ಸೇರಿದಂತೆ ಆವರಣಗಳನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳುವುದು

35. ಪ್ರವೇಶಾಧಿಕಾರಗಳು

36. ಮಂಡಳಿಗೆ ಬರಬೇಕಾಗಿರುವ ಮೊತ್ತಗಳನ್ನು ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡುವುದು

37. ಪ್ರದೇಶ ಅಥವಾ ಎಸ್ಟೇಟು ಅಥವಾ ಅದರ ಭಾಗವನ್ನು ಹಿಂತೆಗೆದುಕೊಳ್ಳುವುದು

38. ಅಭಿಯೋಜನೆಯ ಅಧಿಕಾರ

39. ಅಡ್ಡಿಯುಂಟು ಮಾಡಿದ್ದಕ್ಕಾಗಿ ದಂಡ

40. ನಿಯಮ ರಚನಾಧಿಕಾರ

41. ವಿನಿಯಮಗಳ ರಚನಾಧಿಕಾರ

42. ನಿಯಮಗಳು ಮತ್ತು ವಿನಿಯಮಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು

43. ಸ್ಟಾಂಪು ಸುಂಕ ಮತ್ತು ಫೀಜುಗಳ ವಿನಾಯಿತಿ

44. ಕಂಪನಿಗಳಿಂದ ಅಪರಾಧಗಳು

45. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ

46. ಮಂಡಳಿಯ ನೌಕರರು ಲೋಕ ನೌಕರರಾಗಿರುವುದು

47. ಇತರ ಕಾನೂನುಗಳಿಗೆ ಅಸಂಗತವಾಗಿರುವ ಉಪಬಂಧಗಳ ಪರಿಣಾಮ

48. ಸಂದೇಹ ಮತ್ತು ತೊಂದರೆಗಳನ್ನು ನಿವಾರಿಸುವ ಅಧಿಕಾರ

* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**1966ರ ಅಧಿನಿಯಮ 18.–** ರಾಜ್ಯದಲ್ಲಿನ ಸೂಕ್ತ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಕ್ರಮಬದ್ಧವಾಗಿ ಸ್ಥಾಪಿಸುವ ಮತ್ತು ಅಭಿವೃದ್ಧಿಪಡಿಸುವ ಸಲುವಾಗಿ ಉಪಬಂಧಗಳನ್ನು ರಚಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ. ಈ ಉದ್ದೇಶವನ್ನು ಸಾಧಿಸಲು, ಕೈಗಾರಿಕಾ ಅಭಿವೃದ್ಧಿಗಾಗಿ ಸೂಕ್ತ ಪ್ರದೇಶಗಳನ್ನು ನಿರ್ದಿಷ್ಟಪಡಿಸಲು ಹಾಗೂ ಅಂಥ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಒಂದು ಮಂಡಳಿಯನ್ನು ಸ್ಥಾಪಿಸಲು ಮತ್ತು ಆ ಪ್ರದೇಶದಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಿ ಭೂಮಿ ದೊರೆಯುವಂತೆ ಮಾಡಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 26.3.1966ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV - 2ಎ ಸಂಖ್ಯೆ 57, ಪುಟ 20ರಲ್ಲಿ ಪ್ರಕಟಿಸಲಾಗಿದೆ.)

### II

**1978ರ ತಿದ್ದುಪಡಿ ಮಾಡುವ ಅಧಿನಿಯಮ 27.–** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966ನ್ನು (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 18) ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ಮತ್ತು ಸಾಮಾನ್ಯವಾಗಿ ಅವುಗಳಲ್ಲಿ ಕೈಗಾರಿಕೆಗಳ ಸ್ಥಾಪನೆಯನ್ನು ಪ್ರವರ್ತಿಸಲು ಮತ್ತು ಅವುಗಳನ್ನು ಕ್ರಮಬದ್ಧವಾಗಿ ಅಭಿವೃದ್ಧಿಪಡಿಸಲು ಅಧಿನಿಯಮಿಸಲಾಯಿತು.

ಯಾರೇ ವ್ಯಕ್ತಿಯು, ಯಾವುದೇ ಕೈಗಾರಿಕಾ ಪ್ರದೇಶದಲ್ಲಿ ಅಥವಾ ಕೈಗಾರಿಕಾ ಎಸ್ಟೇಟಿನಲ್ಲಿ ಅವನು ಯಾವ ನಿಬಂಧನೆಗಳ ಅಡಿಯಲ್ಲಿ ಕಟ್ಟಡ ಅಥವಾ ಭೂಮಿಯನ್ನು ಧಾರಣ ಮಾಡಿರುವನೋ ಆ ನಿಬಂಧನೆಗಳಿಗೆ ವಿರುದ್ಧವಾಗಿ ಅಂಥ ಯಾವುದೇ ಕಟ್ಟಡವನ್ನು ನಿರ್ಮಿಸಿದ್ದಲ್ಲಿ ಅಥವಾ ಮಾರ್ಪಾಟು ಮಾಡಿದ್ದಲ್ಲಿ ಅಥವಾ ಉಪಯೋಗಿಸಿದ್ದಲ್ಲಿ ಅವನ ವಿರುದ್ಧ 34ನೇ ಪ್ರಕರಣದ ಅನುಸಾರವಾಗಿ ದಂಡನಾ ಕ್ರಮ ತೆಗೆದುಕೊಳ್ಳಬಹುದು. ಅಧಿನಿಯಮದ ಅಡಿಯಲ್ಲಿ ರಚಿಸಲಾದ ಕಟ್ಟಡ ವಿನಿಯಮಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಅನಧಿಕೃತ ಕಟ್ಟಡಗಳನ್ನು ಕೆಡವಿ ಹಾಕಲು ಅಥವಾ ಮಾರ್ಪಾಟು ಮಾಡಲು ಈ ಅಧಿನಿಯಮದಲ್ಲಿ ಯಾವುದೇ ಉಪಬಂಧ ವಿಲ್ಲದಿರುವುದರಿಂದ ಅನಧಿಕೃತ ಕಟ್ಟಡಗಳನ್ನು ಕೆಡವಿ ಹಾಕುವಂತೆ ಮತ್ತು ಆ ವಿನಿಯಮಗಳಿಗೆ ಮತ್ತು ಈ ಸಂಬಂಧದಲ್ಲಿ ವಿಧಿಸಲಾದ ಷರತ್ತುಗಳಿಗನುಸಾರವಾಗಿ ಕಟ್ಟಡಗಳನ್ನು ನಿರ್ಮಿಸುವಂತೆ ಅಥವಾ ಮಾರ್ಪಾಟು ಮಾಡುವಂತೆ ಆ ಧಾರಕರಿಗೆ ನಿರ್ದೇಶನಗಳನ್ನು ನೀಡಲು ಮತ್ತು ಅವರು ಹಾಗೆ ಮಾಡಲು ತಪ್ಪಿದಲ್ಲಿ ಅವರ ವೆಚ್ಚದಲ್ಲಿ ಅದನ್ನು ಮಾಡಿಸಲು ಮಂಡಳಿಗೆ ಅಧಿಕಾರ ನೀಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 14.6.1978ರ ಕರ್ನಾಟಕ ರಾಜ್ಯ ಪತ್ರದ (ವಿಶೇಷ ಸಂಚಿಕೆ) ಭಾಗ IV-2ಎ ಸಂ. 950, ಪುಟ 5ರಲ್ಲಿ ಪ್ರಕಟವಾಗಿದೆ.)

### III

**1987ರ ತಿದ್ದುಪಡಿ ಮಾಡುವ ಅಧಿನಿಯಮ 19.–** ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಪ್ರಾಧಿಕಾರಗಳೂ ಸೇರಿದಂತೆ ವಿಶಾಲವಾದ ತಳಹದಿಯ ಮೇಲೆ ಮಂಡಳಿಯನ್ನು ರಚಿಸುವ ಸಲುವಾಗಿ ಉಪಬಂಧ ಕಲ್ಪಿಸಲು ಉದ್ದೇಶಿಸಲಾಗಿದೆ. ಇದರಿಂದಾಗಿ, ಮಂಡಳಿಯು ಕೈಗೆತ್ತಿಕೊಳ್ಳುವ ವಿವಿಧ ಕಾರ್ಯಕ್ರಮಗಳ ಸಂಬಂಧದಲ್ಲಿ ಉತ್ತಮ ಸಮನ್ವಯ ಮತ್ತು ಪರಿಣಾಮಕಾರಿ ಅನುಷ್ಠಾನ ಸಾಧ್ಯವಾಗುತ್ತದೆ.

ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ರಚಿಸಲು ಸಹ ಈ ಅವಕಾಶವನ್ನು ಬಳಸಿಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 30.1.1987ರ ಕರ್ನಾಟಕ ರಾಜ್ಯ ಪತ್ರದ (ವಿಶೇಷ ಸಂಚಿಕೆ) ಭಾಗ IV-2ಎ ಸಂ. 77, ಪುಟ 4 ರಲ್ಲಿ ಪ್ರಕಟವಾಗಿದೆ.)

## IV

**1992ರ ತಿದ್ದುಪಡಿ ಮಾಡುವ ಅಧಿನಿಯಮ 12.–** ಕರ್ನಾಟಕ ರಾಜ್ಯ ಹಣಕಾಸು ನಿಗಮವು, ರಾಜ್ಯದಲ್ಲಿನ ಕೈಗಾರಿಕೆಗಳ ಸಂವರ್ಧನೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ ಮತ್ತು ಇದು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಗೆ ಹಣಕಾಸನ್ನು ಸಹ ಒದಗಿಸುತ್ತಿದೆ. ಆದ್ದರಿಂದ ಉತ್ತಮ ಸಮನ್ವಯವನ್ನು ಸಾಧಿಸುವ ದೃಷ್ಟಿಯಿಂದ ಕರ್ನಾಟಕ ರಾಜ್ಯ ಹಣಕಾಸು ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯ ಸದಸ್ಯರಲ್ಲೊಬ್ಬರನ್ನಾಗಿ ಮಾಡುವುದು ಅಗತ್ಯವೆಂದು ಭಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 12.3.1992ರ ಕರ್ನಾಟಕ ರಾಜ್ಯ ಪತ್ರದ (ವಿಶೇಷ ಸಂಚಿಕೆ) ಭಾಗ IV- 2ಎ ಸಂ.143, ಪುಟ 348 ರಲ್ಲಿ ಪ್ರಕಟವಾಗಿದೆ.)

## V

**1997ರ ತಿದ್ದುಪಡಿ ಮಾಡುವ ಅಧಿನಿಯಮ 11.–** 1991ರಲ್ಲಿ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳನ್ನು ಉದಾರೀಕರಣಗೊಳಿಸಿದ ನಂತರ, ಕೈಗಾರಿಕಾ ಕ್ಷೇತ್ರಗಳಲ್ಲಿ ಮಾತ್ರವಲ್ಲದೆ ಮೂಲ ಸೌಕರ್ಯಗಳ ಕ್ಷೇತ್ರಗಳಲ್ಲಿ ಸಹಾ ಖಾಸಗೀ ಕ್ಷೇತ್ರದ ಹಣ ಹೂಡಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಹೀಗಾಗಿ, ದೇಶಿಯ ಮತ್ತು ವಿದೇಶಿ ಕಂಪನಿಗಳಿಂದ ಮೂಲ ಸೌಕರ್ಯ ಕ್ಷೇತ್ರಗಳಾದ ವಿದ್ಯುತ್ ಸ್ಥಾಪನೆಯ ವಿಷಯಗಳು, ವೇಗದ ಸಂಚಾರವುಳ್ಳ ಹೆದ್ದಾರಿಗಳು, ಬಂದರುಗಳು, ವಿಮಾನ ನಿಲ್ದಾಣಗಳು, ಉಪನಗರಗಳು, ಕೈಗಾರಿಕಾ ಕಾಮಗಾರಿಗಳಂಥ ಮೂಲ ಸೌಕರ್ಯ ಕ್ಷೇತ್ರಗಳಲ್ಲಿ ಗಣನೀಯ ಹಣ ತೊಡಗಿಸುವ ಬಗ್ಗೆ ಅನೇಕ ಪ್ರಸ್ತಾವಗಳು ಬಂದಿವೆ. ಈ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಾಕಷ್ಟು ವಿಸ್ತೀರ್ಣದ ಭೂಮಿಯ ಅಗತ್ಯವಿದೆ.

ಅದ್ದರಿಂದ, ಭೂಮಿಯನ್ನು ಆರ್ಜಿಸಲು ಮತ್ತು ಕೈಗಾರಿಕಾ ಮೂಲ ಸೌಕರ್ಯಗಳನ್ನು ಕಲ್ಪಿಸಲು ಮಂಡಳಿಗೆ ಸಾಧ್ಯವಾಗುವಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ. ತದನುಸಾರವಾಗಿ, ಕೈಗಾರಿಕಾ ಮೂಲ ಸೌಲಭ್ಯಗಳು ಎಂಬ ಪದಾವಳಿಯ ಪರಿಭಾಷೆಯನ್ನು ಸೇರಿಸಲು ಉದ್ದೇಶಿಸಲಾಯಿತು.

ಸಂವಿಧಾನದ 73ನೇ ತಿದ್ದುಪಡಿ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರದೇಶವನ್ನು ಅಧಿಸೂಚಿತ ಪ್ರದೇಶವೆಂದು ಘೋಷಿಸಲು ಸಾಧ್ಯವಾಗದಿರುವುದರಿಂದ, 16ನೇ ಪ್ರಕರಣವನ್ನು ಬಿಟ್ಟು ಬಿಡಲಾಗಿದೆ. ಆನುಷಂಗಿಕವಾದ ಕೆಲವು ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 19.2.1997ರ ಕರ್ನಾಟಕ ರಾಜ್ಯ ಪತ್ರದ (ವಿಶೇಷ ಸಂಚಿಕೆ) ಭಾಗ IV- 2ಎ ಸಂ.224, 11ನೇ ಪುಟದಲ್ಲಿ ಪ್ರಕಟಿಸಲಾಗಿದೆ.)

## VI

**2000ದ ತಿದ್ದುಪಡಿ ಮಾಡುವ ಅಧಿನಿಯಮ 19.–** ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ ಉಪಬಂಧಗಳನ್ನು ಅವಲಂಬಿಸದೆ ಅಥವಾ ಸ್ವಾಧೀನಕ್ಕಾಗಿ ಸಿವಿಲ್ ದಾವೆಯನ್ನು ಹೂಡುವುದರ ಮೂಲಕ, ಗುತ್ತಿಗೆಯ ಅಥವಾ ಕರಾರಿನ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಅಥವಾ ಗೇಣಿಯ ಮೂಲಕ ಪಡೆದ ಅನಧಿಕೃತ ಅಧಿಭೋಗದ ಸಂದರ್ಭದಲ್ಲಿ ಆವರಣವನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳುವ ಬಗ್ಗೆ ನಿರ್ದಿಷ್ಟಪಡಿಸಲು ಮಂಡಳಿಗೆ

ಸಾಧ್ಯವಾಗುವಂತೆ 25ನೇ ಪ್ರಕರಣ ಹೊರತಾಗಿ ಉಪಬಂಧವೊಂದನ್ನು ಕಲ್ಪಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2000ರ ವಿಧಾನಸಭಾ ವಿಧೇಯಕ ಸಂಖ್ಯೆ 1 ರಿಂದ ಪಡೆಯಲಾಗಿದೆ.)

## VII

**2022 ರ ತಿದ್ದುಪಡಿ ಅಧಿನಿಯಮ 20**.–ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಭೂ ಸ್ವಾಧೀನ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಯಲ್ಲಿ ನ್ಯಾಯೋಚಿತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ 30)ರ ಉಪಬಂಧಗಳ ಅನ್ವಯಕ್ಕಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 18)ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2022ರ ವಿಧಾನಸಭೆಯ ವಿಧೇಯಕ ಸಂಖ್ಯೆ: 08, ಕಡತ ಸಂಖ್ಯೆ: ಸಂವ್ಯಶಾಇ 08 ಶಾಸನ 2022]

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 18, 24 ಮತ್ತು 32ನೇ ನಮೂದನೆಯಡಿ ಬರುತ್ತದೆ]

[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ: 217, ದಿನಾಂಕ: 05.04.2022ರಲ್ಲಿ ಪ್ರಕಟಣೆಗೊಂಡಿದೆ]

## 1966ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 18

(1966ರ ಮೇ 26ನೇ ದಿನದಂದು [1][ಕರ್ನಾಟಕ][1] ರಾಜ್ಯ ಪತ್ರದಲ್ಲಿ ಮೊದಲು ಪ್ರಕಟವಾಗಿದೆ)

## [1][ಕರ್ನಾಟಕ][1] ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966

(1966ರ ಮೇ ಹದಿನಾಲ್ಕನೇ ದಿನದಂದು ರಾಷ್ಟ್ರಪತಿಯವರ ಅನುಮೋದನೆಪಡೆಯಲಾಗಿದೆ)

(1978ರ 27, 1987ರ 19, 1992ರ 12, 1997ರ 11, 2000ದ 19 ಮತ್ತು 2022ರ 20ರ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)

[1][ಕರ್ನಾಟಕ ರಾಜ್ಯ][1] ದಲ್ಲಿ ಕೈಗಾರಿಕಾ ಪ್ರದೇಶಗಳ ಸ್ಥಾಪನೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಸಾಮಾನ್ಯವಾಗಿ ಅವುಗಳಲ್ಲಿ ಒಂದು ಕೈಗಾರಿಕೆಗಳ ಸ್ಥಾಪನೆಯನ್ನು ಪ್ರವರ್ತಿಸಲು ಹಾಗೂ ಕ್ರಮಬದ್ಧವಾಗಿ ಅಭಿವೃದ್ಧಿಗೊಳಿಸಲು ಮತ್ತು ಆ ಸಲುವಾಗಿ ಒಂದು ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಮತ್ತು ಮೇಲೆ ಹೇಳಿದ ವಿಷಯಗಳಿಗೆ ಸಂಬಂಧಿಸಿದ ಉದ್ದೇಶಗಳಿಗಾಗಿ ವಿಶೇಷ ಉಪಬಂಧಗಳನ್ನು ಕಲ್ಪಿಸುವ ಒಂದು ಅಧಿನಿಯಮ.

[1][ಕರ್ನಾಟಕ ರಾಜ್ಯ][1] ದಲ್ಲಿ ಕೈಗಾರಿಕಾ ಪ್ರದೇಶಗಳ ಸ್ಥಾಪನೆಯನ್ನು ಸುನಿಶ್ಚಿತಪಡಿಕೊಳ್ಳುವುದಕ್ಕಾಗಿ ಮತ್ತು ಸಾಮಾನ್ಯವಾಗಿ ಅಂಥ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗಳನ್ನು ವೃದ್ಧಿಗೊಳಿಸಲು ಹಾಗೂ ಕ್ರಮಬದ್ಧವಾಗಿ ಅಭಿವೃದ್ಧಿ ಗೊಳಿಸಲು ಮತ್ತು ಆ ಸಲುವಾಗಿ ಒಂದು ಕೈಗಾರಿಕಾ ಅಭಿವೃದ್ಧಿ ಮಂಡಳಿ ಸ್ಥಾಪಿಸುವ ಉದ್ದೇಶಕ್ಕಾಗಿ ಮತ್ತು ಮೇಲೆ ಹೇಳಿದ ವಿಷಯಗಳಿಗೆ ಸಂಬಂಧಿಸಿದ ಉದ್ದೇಶಗಳಿಗಾಗಿ ವಿಶೇಷ ಉಪಬಂಧಗಳನ್ನು ಕಲ್ಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನೇಳನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು :–

1. ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶ 1973ರ ಮೂಲಕ ದಿನಾಂಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

### ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗತಕ್ಕದ್ದು.

1. ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶ 1973ರ ಮೂಲಕ ದಿನಾಂಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಈ ಅಧಿನಿಯಮವು, VIIನೇ ಅಧ್ಯಾಯವನ್ನು ಹೊರತುಪಡಿಸಿ, ಈ ಕೂಡಲೇ ಜಾರಿಗೆ ಬರತಕ್ಕದ್ದು; VIIನೇ ಅಧ್ಯಾಯವು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟ ಪಡಿಸಬಹುದಾದಂಥ ಪ್ರದೇಶದಲ್ಲಿ ಮತ್ತು ಅಂಥ [1][ದಿನಾಂಕ][1] ದಿಂದ ಜಾರಿಗೆ ಬರತಕ್ಕದ್ದು.

1. ಅಧಿನಿಯಮದ ಕೊನೆಯ ಭಾಗದ ಟಿಪ್ಪಣಿ ನೋಡಿ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,–

(1) "ಸೌಲಭ್ಯಗಳು" ಎಂಬುದರಲ್ಲಿ ರಸ್ತೆ, ನೀರು ಅಥವಾ ವಿದ್ಯುತ್ ಸರಬರಾಜು, ಬೀದಿ ದೀಪ, ಚರಂಡಿ ವ್ಯವಸ್ಥೆ, ಗ್ರಾಮಸಾರ ಚರಂಡಿ ವ್ಯವಸ್ಥೆ, ನಿರ್ಮಲೀಕರಣ ವ್ಯವಸ್ಥೆ, ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಸೌಲಭ್ಯಗಳೆಂದು ನಿರ್ದಿಷ್ಟಪಡಿಸಬಹುದಾದಂಥ ಇತರ ಸೌಲಭ್ಯಗಳು ಸೇರುತ್ತವೆ;

(2) "ಮಂಡಳಿ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ;

(3) "ಕಟ್ಟಡ" ಎಂದರೆ, ಬಳಸುತ್ತಿರಲಿ ಅಥವಾ ಬಳಸದಿರಲಿ ವಸತಿಯ, ಕೈಗಾರಿಕೆಯ, ವಾಣಿಜ್ಯದ ಅಥವಾ ಇತರ ಉದ್ದೇಶಗಳಿಗಾಗಿ ಬಳಸಲು ಉದ್ದೇಶಿಸಿರುವ ಯಾವುದೇ ರಚನೆ ಅಥವಾ ನಿರ್ಮಾಣ ಅಥವಾ ಒಂದು ರಚನೆಯ ಅಥವಾ ನಿರ್ಮಾಣದ ಭಾಗ;

(4) "ಜಿಲ್ಲಾಧಿಕಾರಿ" ಎಂದರೆ, ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿ, ಮತ್ತು ಅದು ಈ ಅಧಿನಿಯಮದ ಅಡಿಯ ಒಬ್ಬ ಜಿಲ್ಲಾಧಿಕಾರಿಯ ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರದಿಂದ ವಿಶೇಷವಾಗಿ ನೇಮಕಗೊಂಡ ಯಾರೇ ಅಧಿಕಾರಿಯನ್ನು ಒಳಗೊಳ್ಳುತ್ತದೆ ;

(5) "ಅಭಿವೃದ್ಧಿ" ಎಂದರೆ, ಇದರ ವ್ಯಾಕರಣ ವ್ಯತ್ಯಾಸಗಳೊಂದಿಗೆ ಭೂಮಿಯಲ್ಲಿ, ಭೂಮಿಯ ಮೇಲೆ, ಭೂಮಿಯ ಆಚೆ ಅಥವಾ ಭೂಮಿಯ ಕೆಳಗೆ ಸಮಗೊಳಿಸುವುದು, ಅಗೆಯುವುದು, ನಿರ್ಮಿಸುವುದು, ಯಂತ್ರಶಿಲ್ಪಗಾರಿಕೆ, ಗಣಿಗಾರಿಕೆ ಅಥವಾ ಇತರೆ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವುದು, ಅಥವಾ ಯಾವುದೇ ಕಟ್ಟಡ ಅಥವಾ ಭೂಮಿಯಲ್ಲಿ ಯಾವುದೇ ಮುಖ್ಯ ಬದಲಾವಣೆ ಮಾಡುವುದು ಮತ್ತು ಅದರಲ್ಲಿ ಮರು ಅಭಿವೃದ್ಧಿಯೂ ಒಳಗೊಳ್ಳುತ್ತದೆ ಮತ್ತು " ಅಭಿವೃದ್ಧಿ ಪಡಿಸುವುದು " ಎಂಬುದನ್ನು ತದನುಸಾರವಾಗಿ ಅರ್ಥೈಸತಕ್ಕದ್ದು ;

(6) "ಕೈಗಾರಿಕಾ ಪ್ರದೇಶ" ಎಂದರೆ, ಅಭಿವೃದ್ಧಿಪಡಿಸಬೇಕಾದ [1][ಮತ್ತು ಕೈಗಾರಿಕೆಗಳಿಗೆ ಸ್ಥಳಾವಕಾಶ ಕಲ್ಪಿಸಬೇಕಾದ ಮತ್ತು ಕೈಗಾರಿಕಾ ಮೂಲ ಸೌಲಭ್ಯಗಳು ಮತ್ತು ಸೌಕರ್ಯಗಳನ್ನು ಒದಗಿಸಬೇಕಾದ][1] ಆ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಕೈಗಾರಿಕಾ ಪ್ರದೇಶವೆಂದು ಘೋಷಿಸಿದ ಯಾವುದೇ ಪ್ರದೇಶ ಮತ್ತು ಇದರಲ್ಲಿ ಕೈಗಾರಿಕಾ ಎಸ್ಟೇಟ್ ಒಳಗೊಳ್ಳುತ್ತದೆ ;

1. 1997ರ ಅಧಿನಿಯಮ 11 ರ ಮೂಲಕ ದಿನಾಂಕ 18.08.1997 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(7) "ಕೈಗಾರಿಕಾ ಎಸ್ಟೇಟ್" ಎಂದರೆ, ರಾಜ್ಯ ಸರ್ಕಾರವು ಆಯ್ಕೆ ಮಾಡಿದ ಮತ್ತು ಯಾವುವೇ ಕೈಗಾರಿಕೆಗಳ ಅಥವಾ ಕೈಗಾರಿಕಾ ವರ್ಗಗಳ ಉಪಯೋಗಕ್ಕಾಗಿ ಕಾರ್ಖಾನೆಗಳು ಮತ್ತು ಇತರ ಕಟ್ಟಡಗಳನ್ನು ಕಟ್ಟಲಾಗಿರುವ ಯಾವುದೇ ಸ್ಥಳ;

[1][(7ಎ) "ಕೈಗಾರಿಕಾ ಮೂಲ ಸೌಲಭ್ಯಗಳು" ಎಂದರೆ, ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿಸಲಾದ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯಕವಾಗುವ ಸಂಶೋಧನೆ ಮತ್ತು ಅಭಿವೃದ್ಧಿ, ಸಂಪರ್ಕ, ಸಾರಿಗೆ, ಬ್ಯಾಂಕಿಂಗ್, ಮಾರುಕಟ್ಟೆ ವ್ಯವಸ್ಥೆ, ವ್ಯಾಪಾರ ಮತ್ತು ಪ್ರವಾಸ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶಗಳಿಗಾಗಿ ಇರುವ ತಂತ್ರಜ್ಞಾನ ಪಾರ್ಕ್‌ಗಳು ಮತ್ತು ಉಪ ನಗರಗಳಂಥ ಸೌಲಭ್ಯಗಳು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಕೈಗಾರಿಕಾ ಮೂಲ ಸೌಕರ್ಯ ಎಂದು ನಿರ್ದಿಷ್ಟಪಡಿಸಬಹುದಾದಂಥ ಯಾವುವೇ ಇತರ ಸೌಲಭ್ಯಗಳು;][1]

1. 1997ರ ಅಧಿನಿಯಮ 11 ರ ಮೂಲಕ ದಿನಾಂಕ 18.08.1997 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(8) "ಅಧಿಸೂಚನೆ" ಎಂದರೆ, ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಒಂದು ಅಧಿಸೂಚನೆ;

(9) "ಆವರಣಗಳು" ಎಂದರೆ, ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಅದು ಈ ಮುಂದಿನವುಗಳನ್ನು ಒಳಗೊಳ್ಳುತ್ತವೆ,–

(i) ಅಂಥ ಕಟ್ಟಡ ಅಥವಾ ಒಂದು ಕಟ್ಟಡದ ಭಾಗಕ್ಕೆ ಹೊಂದಿಕೊಂಡಿರುವ ತೋಟ, ಮೈದಾನ ಮತ್ತು ಹೊರಮನೆಗಳು ಯಾವುವಾದರೂ ಇದ್ದಲ್ಲಿ, ಅವು ; ಮತ್ತು

(ii) ಹೆಚ್ಚಿನ ಸೌಕರ್ಯ ಅನುಭವಿಸಲು ಅಂಥ ಒಂದು ಕಟ್ಟಡದ ಅಥವಾ ಕಟ್ಟಡದ ಭಾಗಕ್ಕೆ ಅಳವಡಿಸಲಾಗಿರುವ ಯಾವುವೇ ಜೋಡಣೆಗಳು ;

(10) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(11) “ಭೂಮಿ” ಎಂಬ ಪದ ಮತ್ತು “ಹಿತಾಸಕ್ತಿ ಹೊಂದಿರುವ ವ್ಯಕ್ತಿ” ಎಂಬ ಪದಾವಳಿಯು, ಭೂ ಸ್ವಾಧೀನ ಅಧಿನಿಯಮ, 1894ರ (1894ರ ಕೇಂದ್ರಾಧಿನಿಯಮ 1) 3ನೇ ಪ್ರಕರಣದಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾಗಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ – II
## ಕೈಗಾರಿಕಾ ಪ್ರದೇಶಗಳು

**3. ಕೈಗಾರಿಕಾ ಪ್ರದೇಶಗಳ ಘೋಷಣೆ.–** ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯದಲ್ಲಿನ ಯಾವುದೇ ಪ್ರದೇಶವನ್ನು ಕೈಗಾರಿಕಾ ಪ್ರದೇಶವೆಂದು ಘೋಷಿಸಬಹುದು.

(2) ಅಂಥ ಪ್ರತಿಯೊಂದು ಅಧಿಸೂಚನೆಯು, ಆ ಪ್ರದೇಶಕ್ಕೆ ಸಂಬಂಧಿಸಿದ ಪರಿಮಿತಿಗಳನ್ನು ಪರಿಭಾಷಿಸತಕ್ಕದ್ದು.

**4. ಕೈಗಾರಿಕಾ ಪ್ರದೇಶವನ್ನು ವ್ಯತ್ಯಾಸಗೊಳಿಸುವುದು.–** ರಾಜ್ಯ ಸರ್ಕಾರವು, ಯಾವುದೇ ಸಮಯದಲ್ಲಿ, ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಯಾವುದೇ ಕೈಗಾರಿಕಾ ಪ್ರದೇಶದಿಂದ ಯಾವುದೇ ಪ್ರದೇಶವನ್ನು ಬಿಟ್ಟುಬಿಡಬಹುದು, ಅಥವಾ ಅದರಲ್ಲಿ ಯಾವುದೇ ಹೆಚ್ಚುವರಿ ಪ್ರದೇಶವನ್ನು ಸೇರಿಸಬಹುದು.

## ಅಧ್ಯಾಯ – III
## ಮಂಡಳಿಯ ಸ್ಥಾಪನೆ ಮತ್ತು ರಚನೆ

**5. ಸ್ಥಾಪನೆ ಮತ್ತು ನಿಗಮನಗೊಳಿಸುವುದು.–** [1][ಕರ್ನಾಟಕ ರಾಜ್ಯ][1]ದಲ್ಲಿ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸುವ ಉದ್ದೇಶಗಳಿಗಾಗಿ ಮತ್ತು ಸಾಮಾನ್ಯವಾಗಿ ಕೈಗಾರಿಕೆಗಳ ತೀವ್ರ ಸಂವರ್ಧನೆ ಮತ್ತು ಕ್ರಮಬದ್ಧ ಸ್ಥಾಪನೆ ಮತ್ತು ಅಭಿವೃದ್ಧಿಗಾಗಿ ಹಾಗೂ ಕರ್ನಾಟಕ ರಾಜ್ಯದಲ್ಲಿನ ಕೈಗಾರಿಕಾ ಪ್ರದೇಶಗಳಲ್ಲಿ [2][ಕೈಗಾರಿಕಾ ಮೂಲ ಸೌಕರ್ಯಗಳು ಮತ್ತು ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ,][2] ಕರ್ನಾಟಕ ಸರ್ಕಾರವು, ಅಧಿಸೂಚನೆಯ ಮೂಲಕ [1][ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಎಂಬ ಹೆಸರಿನ ಒಂದು ಮಂಡಳಿ][1]ಯನ್ನು ಸ್ಥಾಪಿಸತಕ್ಕದ್ದು.

1. 1973ರ ಕರ್ನಾಟಕ ಕಾನೂನು ಅಳವಡಿಕೆ ಆದೇಶದ ಮೂಲಕ ದಿನಾಂಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1997ರ ಅಧಿನಿಯಮ 11ರ ಮೂಲಕ ದಿನಾಂಕ 18.08.1997ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಸದರಿ ಮಂಡಳಿಯು, ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು, ಮತ್ತು ಅದು ತನ್ನ ನಿಗಮಿತ ಹೆಸರಿನಲ್ಲಿ ದಾವೆ ಹೂಡಬಹುದು ಹಾಗೂ ದಾವೆಗೆ ಗುರಿಯಾಗಬಹುದು, ಮತ್ತು ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೊಳಪಟ್ಟು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು, ಹಾಗೂ ಕರಾರು ಮಾಡಿಕೊಳ್ಳಲು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಗತ್ಯವಾದ ಎಲ್ಲ ಕಾರ್ಯಗಳನ್ನು ಮಾಡಲು ಸಕ್ಷಮವಾಗಿರತಕ್ಕದ್ದು.

**6. ರಚನೆ.–** ಮಂಡಳಿಯು, ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) [1][ಕರ್ನಾಟಕ ಸರ್ಕಾರದ][1] ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ – ಇವರು ಮಂಡಳಿಯ ಪದ ನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು ;

(ಬಿ) [1][ಕರ್ನಾಟಕ ಸರ್ಕಾರದ][1] ಕಾರ್ಯದರ್ಶಿ, ಹಣಕಾಸು ಇಲಾಖೆ;

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ ದಿನಾಂಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][(ಸಿ) ಸರ್ಕಾರದ ಕಾರ್ಯದರ್ಶಿ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ;

(ಸಿಎ) ಕೈಗಾರಿಕಾ ಅಭಿವೃದ್ಧಿ ಆಯುಕ್ತ ಮತ್ತು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕ;

(ಸಿಬಿ) ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ನಿಯಮಿತ;

(ಸಿಸಿ) ಅಧ್ಯಕ್ಷ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ;

(ಸಿಡಿ) ಪಟ್ಟಣ ಯೋಜನೆ ನಿರ್ದೇಶಕ;

(ಸಿಇ) ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ;][1]

1. 1987ರ ಅಧಿನಿಯಮ 19ರ ಮೂಲಕ ದಿನಾಂಕ 04.05.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಸಿಎಫ್) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ನಿಗಮ;][1]

1. 1992ರ ಅಧಿನಿಯಮ 12 ರ ಮೂಲಕ ದಿನಾಂಕ 24.04.1992ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಡಿ) ಮಂಡಳಿಯ ಕಾರ್ಯ ನಿರ್ವಾಹಕ ಸದಸ್ಯ ; ಮತ್ತು

[1][(ಇ) ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನ ಇಬ್ಬರು ನಾಮ ನಿರ್ದೇಶಿತ ಸದಸ್ಯರು.][1]

1. 1987ರ ಅಧಿನಿಯಮ 19ರ ಮೂಲಕ ದಿನಾಂಕ 04.05.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**7. ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು.–** [1][(1)XXX][1]

(2) ಮಂಡಳಿಯ ಸದಸ್ಯರು, ಮಂಡಳಿಯ ಸಭೆಗಳು ಅಥವಾ ಅದರ ಯಾವುದೇ ಸಮಿತಿಯ ಸಭೆಗಳಿಗೆ ಹಾಜರಾಗುವಲ್ಲಿ ಅಥವಾ ಮಂಡಳಿಯು ಅಥವಾ ಮಂಡಳಿಗಾಗಿ ಕೈಗೊಂಡ ಕೆಲಸಕಾರ್ಯಗಳ ಸಂಬಂಧದಲ್ಲಿ ನೇಮಕವಾದಾಗ ಮಂಡಳಿಯ ಸಭೆಗಳಿಗೆ ಹಾಜರಾಗುವುದಕ್ಕೆ ಮಾಡಿದ ವೈಯಕ್ತಿಕ ವೆಚ್ಚವನ್ನು ಭರಿಸುವ ಉದ್ದೇಶಕ್ಕಾಗಿ ನಿಯಮಿಸಬಹುದಾದಂಥ ಪ್ರತಿಫಲ ಭತ್ಯೆಯನ್ನು ಪಡೆದುಕೊಳ್ಳಲು ಹಕ್ಕುಳ್ಳವರಾಗಿರತಕ್ಕದ್ದು.

1. 1987ರ ಅಧಿನಿಯಮ 19ರ ಮೂಲಕ ದಿನಾಂಕ 04.05.1987ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**8. ಮಂಡಳಿಯ ಸಭೆಗಳು.–** ಮಂಡಳಿಯು, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ವಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ಸಮಯಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಕಾರ್ಯಕಲಾಪಗಳ ನಿರ್ವಹಣೆಯ ಸಂಬಂಧದಲ್ಲಿ ಅಂಥ ಕಾರ್ಯವಿಧಾನದ ನಿಯಮಗಳನ್ನು ಪಾಲಿಸತಕ್ಕದ್ದು.

[1][9. **xxx**

10. **xxx**][1]

1. 1987ರ ಅಧಿನಿಯಮ 19ರ ಮೂಲಕ ದಿನಾಂಕ 04.05.1987ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**11. ಮಂಡಳಿಯ ನೌಕರರು.–** (1) ರಾಜ್ಯ ಸರ್ಕಾರವು, ರಾಜ್ಯ ಸರ್ಕಾರದ ಅಧಿಕಾರಿಯೊಬ್ಬರನ್ನು ಮಂಡಳಿಯ ಕಾರ್ಯನಿರ್ವಾಹಕ ಸದಸ್ಯನೆಂದು ನೇಮಕ ಮಾಡತಕ್ಕದ್ದು, ಅವನು, ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು. ಅವನ ಪದದ ನಿಬಂಧನೆಗಳು ಮತ್ತು ಷರತ್ತುಗಳು, ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂತೆ ಇರತಕ್ಕದ್ದು.

(2) ಮಂಡಳಿಯು, ತನ್ನ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ಸಮರ್ಥವಾಗಿ ನೆರವೇರಿಸುವುದಕ್ಕಾಗಿ ತಾನು ಅಗತ್ಯವೆಂದು ಪರಿಗಣಿಸಬಹುದಾದಷ್ಟು ನೌಕರರನ್ನು ಕಾರ್ಯನಿರ್ವಾಹಕ ಸದಸ್ಯನ ಅಧೀನ ನೌಕರರಾಗಿರುವಂತೆ ನೇಮಕ ಮಾಡಬಹುದು. ಸದರಿ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥವುಗಳಾಗಿರತಕ್ಕದ್ದು.

**12. ವ್ಯವಹರಣೆಗಳ ಸಿಂಧುತ್ವದ ಉಳಿಸುವಿಕೆಗಳು.–** ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕೃತ್ಯವನ್ನು ಅಥವಾ ಕೈಗೊಳ್ಳಲಾದ ವ್ಯವಹರಣೆಗಳನ್ನು,–

(ಎ) ಮಂಡಳಿಯ ಅಥವಾ ಅದರ ಯಾವುದೇ ಸಮಿತಿಯಲ್ಲಿ ಯಾವುದೇ ಖಾಲಿ ಹುದ್ದೆ ಇರುವ ಅಥವಾ ರಚನೆಯಲ್ಲಿ ಯಾವುದೇ ದೋಷವಿರುವ; ಅಥವಾ

(ಬಿ) ಪ್ರಕರಣದ ಗುಣಾವಗುಣಗಳನ್ನು ಬಾಧಕಗೊಳಿಸದಿರುವಂಥ ಕೃತ್ಯ ಅಥವಾ ವ್ಯವಹರಣೆಯಲ್ಲಿ ಯಾವುದೇ ದೋಷ ಅಥವಾ ಅನಿಯತತೆ ಇರುವ

– ಕಾರಣ ಮಾತ್ರದಿಂದಲೇ ಪ್ರಶ್ನಿಸಲು ಅವಕಾಶವಿರತಕ್ಕದ್ದಲ್ಲ.

## ಅಧ್ಯಾಯ – IV

## ಮಂಡಳಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳು

**13. ಪ್ರಕಾರ್ಯಗಳು.–** ಈ ಮುಂದಿನವುಗಳು ಮಂಡಳಿಯ ಪ್ರಕಾರ್ಯಗಳಾಗಿರತಕ್ಕದ್ದು, ಎಂದರೆ, –

(i) ಸಾಮಾನ್ಯವಾಗಿ ಕೈಗಾರಿಕೆಗಳ ತ್ವರಿತ ಮತ್ತು ಕ್ರಮಬದ್ಧ ಸ್ಥಾಪನೆ, ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸಂವರ್ಧಿಸುವುದು ಮತ್ತು ಅದಕ್ಕೆ ನೆರವು ನೀಡುವುದು [1][ಮತ್ತು][1] ಕೈಗಾರಿಕಾ ಪ್ರದೇಶಗಳಲ್ಲಿ [1][ಕೈಗಾರಿಕಾ ಮೂಲ ಸೌಕರ್ಯಗಳು ಮತ್ತು ಸೌಲಭ್ಯಗಳನ್ನು ಒದಗಿಸುವುದು;][1] ಮತ್ತು

1. 1997ರ ಅಧಿನಿಯಮ 11ರ ಮೂಲಕ ದಿನಾಂಕ 18.08.1997ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ii) ನಿರ್ದಿಷ್ಟವಾಗಿ, ಮತ್ತು (i) ನೇ ಖಂಡದ ಸಾಮಾನ್ಯತೆಗೆ ಬಾಧಕವಾಗದಂತೆ,–

(ಎ) ರಾಜ್ಯ ಸರ್ಕಾರವು ಘೋಷಿಸಿದ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ತಾವೇ ಉದ್ಯಮಗಳ ಸ್ಥಾಪನೆಗೆ ಅವುಗಳು ಲಭ್ಯವಾಗುವಂತೆ ಮಾಡುವುದು;

(ಬಿ) ಕೈಗಾರಿಕಾ ಪ್ರದೇಶಗಳೊಳಗೆ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು, ಅಭಿವೃದ್ಧಿಗೊಳಿಸುವುದು ಮತ್ತು ವ್ಯವಸ್ಥೆಗೊಳಿಸುವುದು;

(ಸಿ) ಮಂಡಳಿಯ ಸ್ಥಾಪನೆಯ ಉದ್ದೇಶಗಳ ಸಾಧನೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲ ಉದ್ದೇಶಗಳಿಗಾಗಿ ಅದು ಅಗತ್ಯವೆಂದು ಪರಿಗಣಿಸಬಹುದಾದಂಥ ಅಥವಾ ಅಪೇಕ್ಷಿಸಬಹುದಾದ ಅಂಥ ಯೋಜನೆಗಳನ್ನು ಅಥವಾ ಕಾಮಗಾರಿಗಳ ಕಾರ್ಯಕ್ರಮಗಳನ್ನು ಇತರ ನಿಗಮಿತ ನಿಕಾಯ ಅಥವಾ ಸಂಸ್ಥೆಗಳೊಂದಿಗೆ ಜಂಟಿಯಾಗಿಯಾಗಲಿ ಅಥವಾ ಸರ್ಕಾರಿ ಅಥವಾ ಸ್ಥಳೀಯ ಅಥವಾ ಶಾಸನಬದ್ಧ ಪ್ರಾಧಿಕಾರಗಳೊಂದಿಗೆ ಅಥವಾ ಏಜೆನ್ಸಿ ಆಧಾರದ ಮೇಲೆ ಕೈಗೊಳ್ಳುವುದು.

**14. ಮಂಡಳಿಯ ಸಾಮಾನ್ಯ ಅಧಿಕಾರಗಳು.–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಮಂಡಳಿಯು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು,–

(ಎ) ಮಂಡಳಿಯು, ತನ್ನ ಕಾರ್ಯಚಟುವಟಿಕೆಗಳನ್ನು ನೆರವೇರಿಸುವುದಕ್ಕಾಗಿ ಅಗತ್ಯವೆಂದು ಭಾವಿಸಬಹುದಾದಂತೆ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸುವುದು ಮತ್ತು ಧಾರಣ ಮಾಡುವುದು ಮತ್ತು ಮಂಡಳಿಯು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳ ಮೇಲೆ ತಾನು ಧಾರಣ ಮಾಡಿರುವ ಯಾವುದೇ ಸ್ವತ್ತನ್ನು ಗೇಣಿಗೆ ನೀಡುವುದು, ಮಾರಾಟ ಮಾಡುವುದು, ವಿನಿಮಯ ಮಾಡಿಕೊಳ್ಳುವುದು ಅಥವಾ ಅನ್ಯಥಾ ವರ್ಗಾವಣೆ ಮಾಡುವುದು;

(ಬಿ) ತನ್ನ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಗಳಿಗಾಗಿ ಅಗತ್ಯವಾಗಬಹುದಾದಂಥ ಯಾವುದೇ ಭೂಮಿಯನ್ನು ಒಪ್ಪಂದದ ಮೂಲಕ ಖರೀದಿಸುವುದು ಅಥವಾ ಗೇಣಿಯ ಮೇಲೆ ಅಥವಾ ಯಾವುದೇ ನಮೂನೆಯ ಗೇಣಿದಾರಿಕೆಯ ಅಡಿಯಲ್ಲಿ ತೆಗೆದುಕೊಳ್ಳುವುದು ಮತ್ತು ಅಂಥ ಕಟ್ಟಡಗಳನ್ನು ನಿರ್ಮಾಣ ಮಾಡುವುದು ಮತ್ತು ಅಂಥ ಇತರ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು;

(ಸಿ) ಕೈಗಾರಿಕಾ ಪ್ರದೇಶಗಳಲ್ಲಿ ಸೌಕರ್ಯಗಳನ್ನು, [2][ಕೈಗಾರಿಕಾ ಮೂಲ ಸೌಲಭ್ಯಗಳನ್ನು][2] ಮತ್ತು ಸಾಮಾನ್ಯ ಸೌಲಭ್ಯಗಳನ್ನು ಒದಗಿಸುವುದು ಅಥವಾ ಒದಗಿಸುವಂತೆ ಮಾಡುವುದು ಮತ್ತು ಅದಕ್ಕಾಗಿ ಕಾಮಗಾರಿಗಳು ಮತ್ತು ಕಟ್ಟಡಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು ಅಥವಾ ನಿರ್ವಹಿಸುವಂತೆ ಮಾಡುವುದು ;

(ಡಿ) ಕೈಗಾರಿಕೋದ್ಯಮಿಗಳಿಗೆ ಅಥವಾ ಕೈಗಾರಿಕಾ ಉದ್ಯಮಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ವ್ಯಕ್ತಿಗಳಿಗೆ ಗುತ್ತಿಗೆ ಅಥವಾ ಮಾರಾಟ ಅಥವಾ ಗುತ್ತಿಗೆ ಹಾಗೂ ಮಾರಾಟದ ಆಧಾರದ ಮೇಲೆ ಕಟ್ಟಡಗಳು ದೊರಕುವಂತೆ ಮಾಡುವುದು ;

(ಇ) ಕೈಗಾರಿಕೆಗಳ ನೌಕರರಿಗೆ ವಾಸಿಸಲು ಕಟ್ಟಡಗಳನ್ನು ನಿರ್ಮಿಸುವುದು;

(ಎಫ್) (i) ಮಂಡಳಿಯು ಸ್ಥಾಪಿಸಿದ ಅಥವಾ ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ [1][ಆವರಣಗಳು ಅಥವಾ ಅದರ ಭಾಗಗಳೂ ಸೇರಿದಂತೆ ಸೂಕ್ತ ವ್ಯಕ್ತಿಗಳಿಗೆ ವಾಸದ ಮನೆಗಳನ್ನು ಹಂಚಿಕೆ ಮಾಡುವುದು;][1]

(ii) ಹಂಚಿಕೆಯ ಯಾವುವೇ ನಿಬಂಧನೆ ಮತ್ತು ಷರತ್ತುಗಳನ್ನು ಉಲ್ಲಂಘಿಸಿದ ಕಾರಣದಿಂದಾಗಿ ಸಂಬಂಧಪಟ್ಟ ಹಂಚಿಕೆ ಪಡೆದವನನ್ನು ಹೊರ ಹಾಕುವ ಹಕ್ಕು ಮತ್ತು ಅಧಿಕಾರವೂ ಸೇರಿದಂತೆ ಅಂಥ ಹಂಚಿಕೆಗಳನ್ನು ಮಾರ್ಪಾಟು ಮಾಡುವುದು ಅಥವಾ ರದ್ದುಗೊಳಿಸುವುದು ;

[3][(iii) 34ಬಿ ಪ್ರಕರಣದಲ್ಲಿ ಉಪಬಂಧಿಸಲಾಗಿರುವ ರೀತಿಯಲ್ಲಿ ಕೈಗಾರಿಕಾ ಪ್ರದೇಶ, ಅಥವಾ ಕೈಗಾರಿಕಾ ಎಸ್ಟೇಟಿನಲ್ಲಿನ ವಾಸದ ಮನೆಗಳೂ ಸೇರಿದಂತೆ ಆವರಣ ಅಥವಾ ಅದರ ಭಾಗಗಳನ್ನು ಪುನಃ ಸ್ವಾಧೀನಕ್ಕೆ ಪಡೆಯುವುದು;][3]

(ಜಿ) ತನ್ನ ಯಾವುವೇ ಅಧಿಕಾರಗಳನ್ನು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಕಾರ್ಯನಿರ್ವಾಹಕ ಸದಸ್ಯನಿಗೆ ಪ್ರತ್ಯಾಯೋಜಿಸುವುದು;

(ಹೆಚ್) ತನ್ನ ಯಾವುವೇ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ತಾನು ಅಗತ್ಯವೆಂದು ಅಥವಾ ವಿಹಿತವೆಂದು ಪರಿಗಣಿಸಬಹುದಾದಂಥ ಎಲ್ಲ ಕರಾರುಗಳನ್ನು ಮಾಡಿಕೊಳ್ಳುವುದು ಮತ್ತು ಅವನ್ನು ನೆರವೇರಿಸುವುದು;

(ಐ) ತನ್ನ ಪ್ರಕಾರ್ಯಗಳನ್ನು ಸೂಕ್ತವಾಗಿ ನೆರವೇರಿಸಲು ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ತಾನು ಅಗತ್ಯವೆಂದು ಅಥವಾ ವಿಹಿತನೆಂದು ಭಾವಿಸಬಹುದಾದಂಥ ಕಾರ್ಯಗಳನ್ನು ಮಾಡುವುದು ಮತ್ತು ಅಂಥ ಕೃತ್ಯಗಳನ್ನು ನೆರವೇರಿಸುವುದು.

1. 1997ರ ಅಧಿನಿಯಮ 11ರ ಮೂಲಕ ದಿನಾಂಕ 18.08.1997ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2000ದ ಅಧಿನಿಯಮ 19ರ ಮೂಲಕ ದಿನಾಂಕ 25.05.2000ದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2000ದ ಅಧಿನಿಯಮ 19ರ ಮೂಲಕ ದಿನಾಂಕ 25.05.2000ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**15. ಮಂಡಳಿಯ ಆದೇಶಗಳು ಮತ್ತು ದಸ್ತಾವೇಜುಗಳ ಅಧಿಪ್ರಮಾಣನ.–** ಮಂಡಳಿಯ ಎಲ್ಲ ಅನುಮತಿಗಳು, ಆದೇಶಗಳು, ನಿರ್ಣಯಗಳು, ನೋಟೀಸುಗಳು ಮತ್ತು ಇತರ ದಸ್ತಾವೇಜುಗಳನ್ನು ಕಾರ್ಯನಿರ್ವಾಹಕ ಸದಸ್ಯನು ಅಥವಾ ಮಂಡಳಿಯು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ನೌಕರನು ಸಹಿ ಹಾಕುವ ಮೂಲಕ ಅಧಿಪ್ರಮಾಣಿಸತಕ್ಕದ್ದು.

**16. [1][ XXX][1]**

1. 1997ರ ಅಧಿನಿಯಮ 11ರ ಮೂಲಕ ದಿನಾಂಕ 18.08.1997ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**17. ರಾಜ್ಯಸರ್ಕಾರದಿಂದ ನಿರ್ದೇಶನಗಳು.–** ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಅವಶ್ಯವೆಂದು ಅಥವಾ ವಿಹಿತವೆಂದು ಭಾವಿಸಬಹುದಾದ ಸಾಮಾನ್ಯ ಸ್ವರೂಪದ ಅಂಥ

ನಿರ್ದೇಶನಗಳನ್ನು ರಾಜ್ಯಸರ್ಕಾರವು ಮಂಡಳಿಗೆ ನೀಡಬಹುದು ಮತ್ತು ಮಂಡಳಿಯು, ಅಂಥ ನಿರ್ದೇಶನಗಳನ್ನು ಪಾಲಿಸಲು ಮತ್ತು ತದನುಸಾರವಾಗಿ ಕಾರ್ಯ ನಿರ್ವಹಿಸಲು ಬದ್ಧವಾಗಿರತಕ್ಕದ್ದು.

## ಅಧ್ಯಾಯ – V

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.

**18. ಮಂಡಳಿಯ ಆಸ್ತಿಗಳ ವಿನಿಯೋಗ.–** ಮಂಡಳಿಯಲ್ಲಿ ನಿಹಿತವಾಗಿರುವ ಎಲ್ಲಾ ಸ್ವತ್ತು , ನಿಧಿ ಮತ್ತು ಇತರ ಆಸ್ತಿಗಳನ್ನು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮತ್ತು ಅದರ ಉದ್ದೇಶಗಳಿಗಾಗಿ ಅದು ಧಾರಣ ಮಾಡತಕ್ಕದ್ದು ಮತ್ತು ಅದನ್ನು ವಿನಿಯೋಗಿಸತಕ್ಕದ್ದು.

**19. ಮಂಡಳಿಯ ನಿಧಿ.–** ಮಂಡಳಿಯು, ತನ್ನದೇ ಆದ ಸ್ವಂತ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಅದನ್ನು ನಿರ್ವಹಿಸತಕ್ಕದ್ದು, ಅದಕ್ಕೆ ಈ ಮುಂದಿನವುಗಳನ್ನು ಜಮೆ ಮಾಡತಕ್ಕದ್ದು,–

(ಎ) ಅನುದಾನಗಳು, ಸಾಲಗಳು, ಮುಂಗಡಗಳ ರೂಪದಲ್ಲಿ ಅಥವಾ ಇತರ ರೀತಿಯಲ್ಲಿ ರಾಜ್ಯ ಸರ್ಕಾರದಿಂದ ಸ್ವೀಕರಿಸಿದ ಎಲ್ಲ ಹಣ;

(ಬಿ) ಈ ಅಧಿನಿಯಮದ ಅನುಸರಣೆಯಲ್ಲಿ ಮಂಡಳಿಯು ಸ್ವೀಕರಿಸಿದ ಎಲ್ಲ ಫೀಜುಗಳು, ವೆಚ್ಚಗಳು, ಠೇವಣಿಗಳು ಮತ್ತು ಚಾರ್ಜುಗಳು;

(ಸಿ) ಭೂಮಿಗಳು, ಕಟ್ಟಡಗಳು ಮತ್ತು ಇತರ ಚರ ಮತ್ತು ಸ್ಥಿರ ಸ್ವತ್ತುಗಳ ವಿಲೇವಾರಿಯಿಂದ, ಹಾಗೂ ಇತರ ವ್ಯವಹಾರಗಳಿಂದ ಮಂಡಳಿಯು ಸ್ವೀಕರಿಸಿದ ಎಲ್ಲ ಹಣ;

(ಡಿ) ಬಾಡಿಗೆಗಳ ರೂಪದಲ್ಲಿ ಅಥವಾ ಯಾವುದೇ ಇತರ ರೀತಿಯಲ್ಲಿ ಅಥವಾ ಯಾವುವೇ ಇತರ ಮೂಲಗಳಿಂದ ಮಂಡಳಿಯು ಸ್ವೀಕರಿಸಿದ ಎಲ್ಲ ಹಣ;

**20. ಸಾಲ ಪಡೆಯಲು ಮಂಡಳಿಗಿರುವ ಅಧಿಕಾರ.–** ಮಂಡಳಿಯು, ತನಗೆ ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವ ದೃಷ್ಟಿಯಿಂದ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಮುಕ್ತ ಮಾರುಕಟ್ಟೆಯಲ್ಲಿ ಅಥವಾ ಅನ್ಯರೀತಿ ಹಣವನ್ನು ಸಾಲ ತೆಗೆದುಕೊಳ್ಳಬಹುದು.

**21. ಠೇವಣಿಗಳು.–** ಮಂಡಳಿಯು, ಈ ಅಧಿನಿಯಮದ ಉದ್ದೇಶಗಳನ್ನು ತ್ವರಿತಗೊಳಿಸುವ ಸಲುವಾಗಿ ಜಮೀನು, ಕಟ್ಟಡಗಳು ಅಥವಾ ಶೆಡ್‌ಗಳನ್ನು ಹಂಚಿಕೆ ಅಥವಾ ಗುತ್ತಿಗೆ ಅಥವಾ ಮಾರಾಟ ಮಾಡಿರುವಂಥ ಅಥವಾ ಮಾಡುವ ಸಂಭವವಿರುವ ಅಂಥ ವ್ಯಕ್ತಿಗಳಿಂದ, ಸಂಸ್ಥೆಗಳಿಂದ ಅಥವಾ ಪ್ರಾಧಿಕಾರಗಳಿಂದ ಅದು ಅಗತ್ಯವೆಂದು ಭಾವಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಠೇವಣಿಗಳನ್ನು ಸ್ವೀಕರಿಸಬಹುದು.

**22. ಆಯವ್ಯಯ ಮತ್ತು ಕಾಮಗಾರಿಗಳ ಯೋಜನೆ.–** (1) ಮಂಡಳಿಯು, ಪ್ರತಿ ವರ್ಷದ ಜನವರಿ ಕೊನೆಯ ದಿನಾಂಕಕ್ಕೆ ಮೊದಲು, ಮುಂದಿನ ಆರ್ಥಿಕ ವರ್ಷಕ್ಕಾಗಿ ವಾರ್ಷಿಕ ಹಣಕಾಸು ವಿವರಪತ್ರವನ್ನು ಮತ್ತು ಕಾಮಗಾರಿಗಳ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಒಳಗೊಂಡಿರುವ ವಾರ್ಷಿಕ ಹಣಕಾಸು ವಿವರ ಪತ್ರವು, ನಿಯಮಿಸಬಹುದಾಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳೊಂದಿಗೆ ಮುಂದಿನ ಆರ್ಥಿಕ ವರ್ಷದ ಅಂದಾಜು ಜಮೆಗಳು ಮತ್ತು ವೆಚ್ಚಗಳನ್ನು ತೋರಿಸತಕ್ಕದ್ದು.

(3) ವಾರ್ಷಿಕ ಹಣಕಾಸು ವಿವರಪತ್ರ ಮತ್ತು ಕಾಮಗಾರಿಗಳ ಯೋಜನೆಗಳಿಗೆ ಮಾರ್ಚ್ ಕೊನೆಯ ದಿನಕ್ಕೆ ಮುಂಚೆ ರಾಜ್ಯಸರ್ಕಾರದಿಂದ ಅನುಮೋದನೆ ಸಿಗದಿದ್ದಲ್ಲಿ, ಮಂಡಳಿಯು, ವಾರ್ಷಿಕ ಹಣಕಾಸು ಪತ್ರ ಮತ್ತು ಕಾಮಗಾರಿಗಳ ಯೋಜನೆಗೆ ಅನುಮೋದನೆ ದೊರೆತಿದ್ದರೆ ಹೇಗೋ ಹಾಗೆ ಮುಂದುವರೆಯಬಹುದು.

(4) ಮಂಡಳಿಯು, ವರ್ಷದ ಕಾಮಗಾರಿಗಳ ಯೋಜನೆಯಲ್ಲಿ ಬದಲಾವಣೆಗಳನ್ನು ಮತ್ತು ಆಯವ್ಯಯದಲ್ಲಿ ಪುನರ್ವಿನಿಯೋಗಗಳನ್ನು ಮಾಡುವುದಕ್ಕೆ ಸಕ್ಷಮವಾಗಿರತಕ್ಕದ್ದು. ಪರಂತು, ಅಂಥ ಎಲ್ಲ ಬದಲಾವಣೆಗಳನ್ನು ಮತ್ತು ಅನುಮೋದಿತ ಆಯವ್ಯಯದ ಪುನರ್ವಿನಿಯೋಗಗಳನ್ನು ರಾಜ್ಯ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರತಕ್ಕದ್ದು.

(5) ರಾಜ್ಯ ಸರ್ಕಾರವು, ಒಂದು ಆದೇಶದ ಮೂಲಕ, ವಾರ್ಷಿಕ ಹಣಕಾಸು ವಿವರಪತ್ರ ಮತ್ತು ಕಾಮಗಾರಿಗಳ ಕಾರ್ಯ ಯೋಜನೆಯನ್ನು ಸಲ್ಲಿಸಲು (1)ನೇ ಉಪ ಪ್ರಕರಣದಲ್ಲಿ ನಿಯಮಿಸಲಾದ ಕೊನೆಯ ದಿನಾಂಕವನ್ನು ವಿಸ್ತರಿಸಬಹುದಾಗಿದೆ.

**23. ನಿಧಿಗಳಿಂದ ವೆಚ್ಚ.–** (1) ಮಂಡಳಿಯು, ಈ ಅಧಿನಿಯಮದ ಅಡಿಯಲ್ಲಿ ಅಧಿಕೃತಗೊಳಿಸಲಾದ ಉದ್ದೇಶಗಳಿಗಾಗಿ ಅಗತ್ಯವೆನಿಸುವಂಥ ಮೊತ್ತಗಳನ್ನು ಮಂಡಳಿಯ ನಿಧಿಗಳಿಂದ ವೆಚ್ಚ ಮಾಡುವುದಕ್ಕೆ ಅಧಿಕಾರ ಹೊಂದಿರತಕ್ಕದ್ದು.

(2) (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಮಂಡಳಿಯು, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಶಾಸನಬದ್ಧ ಸಾರ್ವಜನಿಕ ಉದ್ಯಮವು, ತನ್ನ ಕೈಗಾರಿಕಾ ಎಸ್ಟೇಟಿಗೆ ಅಥವಾ ಕೈಗಾರಿಕಾ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಭೂಮಿಯನ್ನು ಆರ್ಜಿಸುವಲ್ಲಿ ಮಾಡಲಾದ ವೆಚ್ಚವೂ ಸೇರಿದಂತೆ, ಅಂಥ ಪ್ರಾಧಿಕಾರ ಅಥವಾ ಉದ್ಯಮದ ಯಾವುದೇ ಶಾಸನಬದ್ಧ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ವಹಿಸಿದ ಅಥವಾ ವಹಿಸಬೇಕಾದ ವೆಚ್ಚದ ಬಗ್ಗೆ, ಅದು ಸೂಕ್ತವೆಂದು ಭಾವಿಸಬಹುದಾದಂಥ ಮೊತ್ತವನ್ನು ನೀಡಬಹುದು.

**24. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಮಂಡಳಿಯು ತನ್ನ ವ್ಯವಹಾರದ ಮತ್ತು ವ್ಯವಹರಣೆಗಳ ಸಂಬಂಧದ ಲೆಕ್ಕಪತ್ರದ ಪುಸ್ತಕಗಳನ್ನು ಮತ್ತು ಇತರ ಪುಸ್ತಕಗಳನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು.

(2) ಮಂಡಳಿಯ ಲೆಕ್ಕಪತ್ರಗಳನ್ನು ರಾಜ್ಯ ಸರ್ಕಾರವು ನೇಮಿಸಿದ ಒಬ್ಬ ಲೆಕ್ಕಪರಿಶೋಧಕನು ಲೆಕ್ಕ ಪರಿಶೋಧನೆ ಮಾಡತಕ್ಕದ್ದು.

(3) ಮಂಡಳಿಯ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧನೆ ಮಾಡಿದ ತರುವಾಯ ಆದಷ್ಟು ಬೇಗ, ಮಂಡಳಿಯು, ಈ ಮುಂದಿನವುಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ಎಂದರೆ, –

(ಎ) ಪರಿಶೋಧಿತ ಲೆಕ್ಕಪತ್ರಗಳ ಒಂದು ಪ್ರತಿ, ಮತ್ತು

(ಬಿ) ಸಂಬಂಧಪಟ್ಟ ಆರ್ಥಿಕ ವರ್ಷದಲ್ಲಿ ಮಂಡಳಿಯ ಕಾರ್ಯನಿರ್ವಹಣೆಯ ವಾರ್ಷಿಕ ವರದಿ ಮತ್ತು ಮಂಡಳಿಯ ಕಾರ್ಯಚಟುವಟಿಕೆಗಳ ವೃತ್ತಾಂತ ಮತ್ತು ನಿಯಮಿಸಬಹುದಾದಂಥ ಇತರ ವಿವರಗಳು, ಹಾಗೂ

(ಸಿ) ಮಂಡಳಿಯ ಪರಿಶೋಧಿತ ಲೆಕ್ಕಪತ್ರಗಳ ಬಗ್ಗೆ ಲೆಕ್ಕ ಪರಿಶೋಧಕರ ವರದಿ.

(4) ರಾಜ್ಯ ಸರ್ಕಾರವು, ಮಂಡಳಿಯ ಪರಿಶೋಧಿತ ಲೆಕ್ಕಪತ್ರಗಳನ್ನು ಮತ್ತು ಅದರ ಮೇಲಿನ ಲೆಕ್ಕ ಪರಿಶೋಧಿತ ವರದಿಯನ್ನು ಮತ್ತು (3) ನೇ ಉಪ ಪ್ರಕರಣದ ಮೇರೆಗೆ ತನಗೆ ಕಳುಹಿಸಿಕೊಟ್ಟಿರುವ ವಾರ್ಷಿಕ ವರದಿಯನ್ನು ಸ್ವೀಕರಿಸಿದ ತರುವಾಯ, ರಾಜ್ಯ ಸರ್ಕಾರವು ಅವುಗಳನ್ನು ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

## ಅಧ್ಯಾಯ –VI

**ಮಂಡಳಿಯ ಆವರಣಗಳಿಗೆ, [1][ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974][1] ನ್ನು ಅನ್ವಯಿಸುವುದು ಮತ್ತು [2][ಕರ್ನಾಟಕ][2] ಬಾಡಿಗೆ ನಿಯಂತ್ರಣ ಅಧಿನಿಯಮ, 1961ನ್ನು ಅನ್ವಯಿಸದಿರುವುದು.**

1. 1987ರ ಅಧಿನಿಯಮ 19ರ ಮೂಲಕ ದಿನಾಂಕ 04.05.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ ದಿನಾಂಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**25. ಮಂಡಳಿಯ ಆವರಣಗಳಿಗೆ [1][1974ರ ಕರ್ನಾಟಕ ಅಧಿನಿಯಮ ಸಂಖ್ಯೆ 32][1] ನ್ನು ಅನ್ವಯಿಸುವುದು.–** (1) ರಾಜ್ಯ ಸರ್ಕಾರವು ಸಾರ್ವಜನಿಕ ಆವರಣಗಳ ಸಂಬಂಧದಲ್ಲಿ [1][ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) ಅಧಿನಿಯಮ, 1974][1] ನ್ನು ಅನ್ವಯಿಸುವಂತೆಯೇ, ಮಂಡಳಿಗೆ ಸೇರಿರುವ, ಆದರೆ (2)ನೇ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು ಅದರಲ್ಲಿ ನಿಹಿತವಾಗಿರುವ ಅಥವಾ ಅದು ಗೇಣಿಗೆ ನೀಡಿರುವ ಆವರಣಗಳಿಗೆ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅನ್ವಯವಾಗತಕ್ಕದ್ದೆಂದು ಅಧಿಸೂಚನೆಯ ಮೂಲಕ ಉಪಬಂಧ ಕಲ್ಪಿಸಬಹುದು.

1. 1987ರ ಅಧಿನಿಯಮ 19ರ ಮೂಲಕ ದಿನಾಂಕ 04.05.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಮೇಲೆ ಹೇಳಿದ ಅಧಿನಿಯಮ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು, ಈ ಮುಂದಿನ ಮಾರ್ಪಾಟುಗಳೊಂದಿಗೆ ಮಂಡಳಿಯ ಆವರಣಗಳಿಗೆ ಅನ್ವಯವಾಗತಕ್ಕದ್ದು, ಎಂದರೆ,–

(ಎ) ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಸರ್ಕಾರದ ಅಥವಾ ಮಂಡಳಿಯ ಅಧೀನದಲ್ಲಿರುವ ಯಾರೇ ಅಧಿಕಾರಿಯನ್ನು, ಮೇಲೆ ಹೇಳಿದ ಅಧಿನಿಯಮದ ಉದ್ದೇಶಗಳಿಗಾಗಿ ಸಕ್ಷಮ ಅಧಿಕಾರಿಯನ್ನಾಗಿ ನೇಮಿಸಬಹುದು.

(ಬಿ) ಆ ಅಧಿನಿಯಮದಲ್ಲಿ ಮತ್ತು ಆ ನಿಯಮಗಳಲ್ಲಿ "ಸಾರ್ವಜನಿಕ ಆವರಣಗಳು" ಎಂಬುದಕ್ಕೆ ಮಾಡಿದ ಉಲ್ಲೇಖಗಳನ್ನು ಮಂಡಳಿಯ ಆವರಣಗಳಿಗೆ ಮಾಡಿದ ಉಲ್ಲೇಖಗಳು ಎಂಬುದಾಗಿ ಭಾವಿಸತಕ್ಕದ್ದು ಮತ್ತು ಆ ಅಧಿನಿಯಮದಲ್ಲಿನ 6,7,8, [1][14,15,16 ಮತ್ತು 17ನೇ][1] ಪ್ರಕರಣಗಳಲ್ಲಿ "ರಾಜ್ಯ ಸರ್ಕಾರ" ಎಂಬುದಕ್ಕೆ ಮಾಡಿದ ಉಲ್ಲೇಖಗಳನ್ನು ಮಂಡಳಿಗೆ ಮಾಡಿದ ಉಲ್ಲೇಖಗಳು ಎಂದು ಭಾವಿಸತಕ್ಕದ್ದು.

1. 1987ರ ಅಧಿನಿಯಮ 19ರ ಮೂಲಕ ದಿನಾಂಕ 04.05.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**26. ಮಂಡಳಿಯ ಆವರಣಗಳಿಗೆ 1961ರ [1][ಕರ್ನಾಟಕ][1] ಅಧಿನಿಯಮ 22ನ್ನು ಅನ್ವಯಿಸದಿರುವುದು.–** 1961ರ [1][ಕರ್ನಾಟಕ][1] ಬಾಡಿಗೆ ನಿಯಂತ್ರಣ ಅಧಿನಿಯಮವು,–

(ಎ) ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಉದ್ದೇಶಗಳಿಗಾಗಿ ಮಂಡಳಿಗೆ ಸೇರಿರುವ ಅಥವಾ ಅದರಲ್ಲಿ ನಿಹಿತವಾಗಿರುವ ಯಾವುವೇ ಆವರಣಗಳಿಗೆ ಅನ್ವಯವಾಗತಕ್ಕದ್ದಲ್ಲ ;

(ಬಿ) ಯಾವುವೇ ಅಂಥ ಆವರಣಗಳ ಸಂಬಂಧದಲ್ಲಿ ಮಂಡಳಿಯು ಸೃಜಿಸಿಕೊಂಡಿರುವ ಯಾವುವೇ ಗೇಣಿದಾರಿಕೆಗಳು ಅಥವಾ ಅಂಥವೇ ಸಂಬಂಧಗಳಿಗೆ ಮಂಡಳಿಯ ವಿರುದ್ಧ ಅನ್ವಯವಾಗತಕ್ಕದ್ದಲ್ಲ ;

(ಸಿ) ಆದರೆ, ಮಂಡಳಿಗೆ ಬಾಡಿಗೆಗೆ ನೀಡಲಾದ ಯಾವುವೇ ಆವರಣಗಳಿಗೆ ಅನ್ವಯವಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ, ಮೂಲಕ ದಿನಾಂಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಅಧ್ಯಾಯ – VII

## ಭೂಮಿಯ ಸ್ವಾಧೀನ ಮತ್ತು ವಿಲೆ

**27. ಅನ್ವಯ.–** ಈ ಅಧ್ಯಾಯದ ಉಪಬಂಧಗಳು, 1ನೇ ಪ್ರಕರಣದ (3)ನೇಉಪ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಿರುವ ಅಂಥ ಪ್ರದೇಶಗಳಿಗೆ ಅಂಥ ದಿನಾಂಕದಿಂದ ಅನ್ವಯವಾಗತಕ್ಕದ್ದು.

**28. ಭೂ ಸ್ವಾಧೀನ.–** (1) ಯಾವುದೇ ಸಮಯದಲ್ಲಿ, ರಾಜ್ಯ ಸರ್ಕಾರವು, ಮಂಡಳಿಯು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ

ಯಾವುದೇ ಇತರ ಉದ್ದೇಶಕ್ಕಾಗಿ ಯಾವುದೇ ಭೂಮಿಯು ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅಂಥ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ತನ್ನ ಉದ್ದೇಶದ ಬಗ್ಗೆ ನೋಟೀಸನ್ನು ನೀಡಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಪ್ರಕಟಿಸಿದ ಮೇಲೆ, ರಾಜ್ಯ ಸರ್ಕಾರವು, ಅದರ ಮಾಲೀಕನಿಗೆ ಅಥವಾ ಮಾಲೀಕನು ಅಧಿಭೋಗದಾರನಲ್ಲದಿದ್ದರೆ ಭೂಮಿಯ ಅಧಿಭೋಗದಾರನಿಗೆ ಮತ್ತು ಅದರಲ್ಲಿ ಹಿತಾಸಕ್ತಿ ಹೊಂದಿದ್ದಾರೆಂದು ತಿಳಿದುಬಂದ ಅಥವಾ ಹಿತಾಸಕ್ತಿ ಹೊಂದಿರುವಂಥ ಎಲ್ಲ ವ್ಯಕ್ತಿಗಳಿಗೆ ಆ ಭೂಮಿಯನ್ನು ಏಕೆ ಸ್ವಾಧೀನ ಪಡಿಸಿಕೊಳ್ಳಬಾರದು ಎಂಬ ಬಗ್ಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಕಾರಣವನ್ನು ತೋರಿಸುವಂತೆ ನೋಟೀಸನ್ನು ಜಾರಿ ಮಾಡತಕ್ಕದ್ದು.

(3) ಭೂಮಿಯ ಮಾಲೀಕನು ಮತ್ತು ಅದರಲ್ಲಿ ಹಿತಾಸಕ್ತಿ ಹೊಂದಿರುವ ಯಾರೇ ಇತರ ವ್ಯಕ್ತಿಗಳು ತೋರಿಸಿದ ಕಾರಣ ಯಾವುದೇ ಇದ್ದರೆ ಅದನ್ನು ಪರಿಗಣಿಸಿದ ನಂತರ ಮತ್ತು ಅಂಥ ಮಾಲೀಕನಿಗೆ ಮತ್ತು ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ತರುವಾಯ, ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಹೊರಡಿಸಬಹುದು.

(4) (3)ನೇ ಉಪಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸಿದ ತರುವಾಯ, (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಆ ಯಾವುದೇ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳತಕ್ಕದ್ದೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ ಆ ಬಗ್ಗೆ ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಒಂದು ಘೋಷಣೆಯನ್ನು ಮಾಡತಕ್ಕದ್ದು.

(5) (4)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರೀ ರಾಜ್ಯಪತ್ರದಲ್ಲಿ ಘೋಷಣೆಯನ್ನು ಪ್ರಕಟಿಸಿದ ಮೇಲೆ, ಆ ಭೂಮಿಯು, ಎಲ್ಲ ಪೂರ್ವಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತವಾಗಿರತಕ್ಕದ್ದು.

(6) ಯಾವುದೇ ಭೂಮಿಯು, (5)ನೇ ಉಪಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವಲ್ಲಿ ರಾಜ್ಯ ಸರ್ಕಾರವು ಲಿಖಿತ ನೋಟೀಸು ನೀಡುವ ಮೂಲಕ, ಆ ಭೂಮಿಯ ಸ್ವಾಧೀನವನ್ನು ಹೊಂದಿರುವ ಯಾರೇ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ರಾಜ್ಯ ಸರ್ಕಾರಕ್ಕೆ ಅಥವಾ ಈ ಸಂಬಂಧದಲ್ಲಿ ಅದು ಯುಕ್ತವಾಗಿ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ ಅದನ್ನು ಅರ್ಥೈಸುವಂತೆ ಅಥವಾ ಅದರ ಸ್ವಾಧೀನವನ್ನು ಬಿಟ್ಟುಕೊಡುವಂತೆ ಆದೇಶಿಸಬಹುದು.

(7) ಯಾರೇ ವ್ಯಕ್ತಿಯು, (5)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶವನ್ನು ಪಾಲಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ, ರಾಜ್ಯ ಸರ್ಕಾರವು ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಅಧಿಕೃತನಾದ ಯಾರೇ ಅಧಿಕಾರಿಯು ಆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಈ ಉದ್ದೇಶಕ್ಕಾಗಿ ಅಗತ್ಯವಾಗಬಹುದಾದಂಥ ಬಲವನ್ನು ಪ್ರಯೋಗಿಸಬಹುದು.

(8) ಮಂಡಳಿಗಾಗಿ ಭೂಮಿಯನ್ನು, ಸ್ವಾಧೀನಪಡಿಸಿಕೊಂಡಿರುವಲ್ಲಿ, ರಾಜ್ಯ ಸರ್ಕಾರವು, ಭೂಮಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡ ನಂತರ, ಆ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತೋ ಆ ಉದ್ದೇಶಕ್ಕಾಗಿ ಭೂಮಿಯನ್ನು ಮಂಡಳಿಗೆ ವರ್ಗಾವಣೆ ಮಾಡಬಹುದು.

**29. ನಷ್ಟ ಪರಿಹಾರ.–** (1) ಈ ಅಧ್ಯಾಯದ ಅಡಿಯಲ್ಲಿ ರಾಜ್ಯ ಸರ್ಕಾರವು ಯಾವುದೇ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುವಲ್ಲಿ, ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಂಥ ಸ್ವಾಧೀನಕ್ಕಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

(2) ನಷ್ಟ ಪರಿಹಾರದ ಮೊತ್ತವನ್ನು, ರಾಜ್ಯ ಸರ್ಕಾರ ಮತ್ತು ನಷ್ಟ ಪರಿಹಾರ ತೆಗೆದುಕೊಳ್ಳಬೇಕಾದ ವ್ಯಕ್ತಿಯ ನಡುವೆ ಒಪ್ಪಂದದ ಮೂಲಕ ನಿರ್ಧರಿಸಲಾಗಿರುವಲ್ಲಿ ಅದನ್ನು ಅಂಥ ಒಪ್ಪಂದಕ್ಕೆ ಅನುಸಾರವಾಗಿ ಸಂದಾಯ ಮಾಡತಕ್ಕದ್ದು.

(3) ಹಾಗೆ ಯಾವುದೇ ಒಪ್ಪಂದಕ್ಕೆ ಬರಲಾಗದಿದ್ದಲ್ಲಿ, ರಾಜ್ಯ ಸರ್ಕಾರವು, ಅಂಥ ಸ್ವಾಧೀನಕ್ಕಾಗಿ ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಮೊತ್ತವನ್ನು ಹಾಗೂ ಅಂಥ ನಷ್ಟ ಪರಿಹಾರವನ್ನು ಯಾವ ವ್ಯಕ್ತಿ

ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದೆಂಬುದನ್ನು ನಿರ್ಧರಿಸುವುದಕ್ಕಾಗಿ ಪ್ರಕರಣವನ್ನು ಜಿಲ್ಲಾಧಿಕಾರಿಗೆ ಉಲ್ಲೇಖಿಸತಕ್ಕದ್ದು.

(4) (3)ನೇ ಉಪ ಪ್ರಕರಣದ ಅಡಿಯಲ್ಲಿನ ಒಂದು ಉಲ್ಲೇಖವನ್ನು ಸ್ವೀಕರಿಸಿದ ಮೇಲೆ ಜಿಲ್ಲಾಧಿಕಾರಿಯು ಅಂಥ ಭೂಮಿಯ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ಮತ್ತು ಅದರಲ್ಲಿ ಹಿತಾಸಕ್ತಿ ಹೊಂದಿದ್ದಾರೆಂದು ತಿಳಿದುಬಂದ ಮತ್ತು ನಂಬಬಹುದಾದ ಎಲ್ಲ ವ್ಯಕ್ತಿಗಳಿಗೆ ತನ್ನ ಮುಂದೆ ಹಾಜರಾಗಿ ಸದರಿ ಭೂಮಿಯಲ್ಲಿನ ತಮ್ಮ ತಮ್ಮ ಹಿತಾಸಕ್ತಿಗಳನ್ನು ತಿಳಿಸುವಂತೆ ನೋಟೀಸನ್ನು ಜಾರಿ ಮಾಡತಕ್ಕದ್ದು.

[1][**30. 2013ರ ಕೇಂದ್ರ ಅಧಿನಿಯಮ 30ರ ಅನ್ವಯ.–** ಭೂ ಸ್ವಾಧೀನ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಯಲ್ಲಿ ನ್ಯಾಯೋಚಿತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 30) 23, 23ಎ, 26, 27, 28, 29, 30, 64, 65, 69, 72, 73, 74, 75, 76, 77, 78,79, 80, 96ನೇ ಪ್ರಕರಣಗಳು ಮತ್ತು ಅನುಸೂಚಿ–1, ಆ ಉದ್ದೇಶಕ್ಕಾಗಿ, ಈ ಅಧ್ಯಾಯದ ಅಡಿಯಲ್ಲಿ ಸ್ವಾದೀನಪಡಿಸಿಕೊಳ್ಳಲಾದ ಜಮೀನುಗಳ ಸಂಬಂಧದಲ್ಲಿ ಅವುಗಳನ್ನು ಅದರ ಭಾಗವಾಗಿ ಮರು ಅಧಿನಿಯಮಿತಗೊಳಿಸಲಾಗಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಈ ಅಧಿನಿಯಮದ ಭಾಗವಾಗಿರುತ್ತವೆ ಎಂದು ಭಾವಿಸತಕ್ಕದ್ದು.][1]

1. 2022ರ ಅಧಿನಿಯಮ 20ರ ಮೂಲಕ ದಿನಾಂಕ: 05.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**31. ರಾಜ್ಯ ಸರ್ಕಾರದಿಂದ ಅಧಿಕಾರಗಳ ಪ್ರತ್ಯಾಯೋಜನೆ.–** ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸಿದರೆ, ಈ ಅಧ್ಯಾಯದ ಅಡಿಯಲ್ಲಿನ ತನ್ನ ಯಾವುವೇ ಅಧಿಕಾರಗಳನ್ನು ಈ ಬಗ್ಗೆ ರಚಿಸಲಾದ ನಿಯಮಗಳ ಮೂಲಕ, ತನ್ನ ಯಾರೇ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದು.

## ಅಧ್ಯಾಯ – VIII

### ಪೂರಕ ಮತ್ತು ಸಂಕೀರ್ಣ ಉಪಬಂಧಗಳು

**32. ಸರ್ಕಾರಿ ಭೂಮಿಗಳು.–** ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯ ರೂಪಕ್ಕೆ ತರಲು ರಾಜ್ಯ ಸರ್ಕಾರವು, ರಾಜ್ಯ ಸರ್ಕಾರ ಮತ್ತು ಮಂಡಳಿಯ ನಡುವೆ ಒಪ್ಪಿಗೆಯಾಗಬಹುದಾದಂಥ ಷರತ್ತುಗಳ ಮೇಲೆ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಯಾವುವೇ ಭೂಮಿಗಳನ್ನು ಮಂಡಳಿಯ ವಶದಲ್ಲಿಡತಕ್ಕದ್ದು.

(2) ಅಂಥ ಯಾವುದೇ ಭೂಮಿಯನ್ನು ಮಂಡಳಿಯಿಂದ ಅಥವಾ ಮಂಡಳಿಯ ನಿಯಂತ್ರಣದಲ್ಲಿ ಮತ್ತು ಮೇಲ್ವಿಚಾರಣೆಯಲ್ಲಿ ಅಭಿವೃದ್ಧಿಪಡಿಸಿದ ತರುವಾಯ, ಈ ಸಂಬಂಧವಾಗಿ ರಾಜ್ಯ ಸರ್ಕಾರವು ರಚಿಸಿದ ವಿನಿಯಮಗಳಿಗೆ ಮತ್ತು ನೀಡಿದ ನಿರ್ದೇಶನಗಳಿಗೆ ಅನುಸಾರವಾಗಿ ಮಂಡಲಿಯು ಆ ಭೂಮಿಯ ಬಗ್ಗೆ ವ್ಯವಹರಿಸತಕ್ಕದ್ದು.

(3) (1)ನೇ ಉಪ ಪ್ರಕರಣದ ಅಡಿಯಲ್ಲಿ ಮಂಡಳಿಯ ವಿಲೆಯಲ್ಲಿಡಲಾಗಿರುವ ಯಾವುದೇ ಭೂಮಿಯು, ಆ ತರುವಾಯ ಯಾವುದೇ ಸಮಯದಲ್ಲಿ ರಾಜ್ಯ ಸರ್ಕಾರಕ್ಕೆ ಅಗತ್ಯವಾದರೆ ಮಂಡಳಿಯು, ರಾಜ್ಯ ಸರ್ಕಾರವು ಮತ್ತು ತಾನು ಪರಸ್ಪರ ಒಪ್ಪಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅದನ್ನು ರಾಜ್ಯ ಸರ್ಕಾರದ ವಿಲೆಗೆ ಒಪ್ಪಿಸಬಹುದು.

**33. ಕೈಗಾರಿಕಾ ಪ್ರದೇಶದಲ್ಲಿನ ಭೂಮಿಯ ಮಾಲೀಕನಿಂದಾದ ಕೆಲವು ತಪ್ಪಿತಗಳ ಸಂದರ್ಭದಲ್ಲಿ ಮಂಡಳಿಯ ಅಧಿಕಾರಗಳು.–** (1) ಮಂಡಳಿಯು ಒಂದು ಸ್ಥಳೀಯ ವಿಚಾರಣೆಯನ್ನು ನಡೆಸಿದ ತರುವಾಯ ಕೈಗಾರಿಕಾ ಪ್ರದೇಶದಲ್ಲಿರುವ ಯಾವುದೇ ಭೂಮಿಯ ಮಾಲೀಕನು ಅಥವಾ ಗೇಣಿದಾರನು ಅಂಥ ಭೂಮಿಯ ಸಂಬಂಧದಲ್ಲಿ ಒದಗಿಸಲೇಬೇಕೆಂದು ಮಂಡಳಿಯು ಅಭಿಪ್ರಾಯಪಡುವಂಥ ಯಾವುದೇ ಸೌಕರ್ಯವನ್ನು ಒದಗಿಸಲು ಅಥವಾ ಈ ಅಧಿನಿಯಮದ ಅಡಿಯಲ್ಲಿ ಅನುಮತಿಯನ್ನು ಪಡೆಯಲಾಗಿರುವಂಥ ಆ ಭೂಮಿಯ ಅಭಿವೃದ್ಧಿಯನ್ನು ಮಾಡಲು ತಪ್ಪಿದ್ದಾನೆಂದು ಮಂಡಳಿಗೆ ಮನದಟ್ಟಾದರೆ, ಮಂಡಳಿಯು ಆ ಮಾಲೀಕನಿಗೆ

ಅಥವಾ ಗೇಣಿದಾರನಿಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಸೌಕರ್ಯವನ್ನು ಒದಗಿಸುವಂತೆ ಅಥವಾ ಅಭಿವೃದ್ಧಿಯನ್ನು ಕೈಗೊಳ್ಳುವಂತೆ ಅಗತ್ಯಪಡಿಸುವ ಒಂದು ನೋಟೀಸನ್ನು ಜಾರಿ ಮಾಡಬಹುದು.

(2) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಅಂಥ ಯಾವುದೇ ಸೌಕರ್ಯವನ್ನು ಒದಗಿಸದಿದ್ದರೆ ಅಥವಾ ಅಂಥ ಯಾವುದೇ ಅಭಿವೃದ್ಧಿಯನ್ನು ಕೈಗೊಳ್ಳದಿದ್ದರೆ, ಆಗ ಮಂಡಳಿಯು, ತಾನು ಸೂಕ್ತವೆಂದು ಭಾವಿಸಬಹುದಾದಂತೆ ಭೂಮಿಯ ಮಾಲೀಕನ ಅಥವಾ ಗೇಣಿದಾರನ ವೆಚ್ಚದಲ್ಲಿ ತಾನೇ ಸೌಕರ್ಯವನ್ನು ಒದಗಿಸಬಹುದು ಅಥವಾ ಅಭಿವೃದ್ಧಿಯನ್ನು ಕಾರ್ಯಗತಗೊಳಿಸಬಹುದು ಅಥವಾ ಅಂಥ ಏಜೆನ್ಸಿಯ ಮೂಲಕ ಒದಗಿಸುವಂತೆ ಅಥವಾ ಕೈಗೊಳ್ಳುವಂತೆ ಮಾಡಬಹುದು:

ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ, ಮಂಡಳಿಯು, ಭೂಮಿಯ ಮಾಲೀಕ ಅಥವಾ ಗೇಣಿದಾರನಿಗೆ ಅಂಥ ಕ್ರಮವನ್ನು ಏಕೆ ತೆಗೆದುಕೊಳ್ಳಬಾರದು ಎಂಬ ಬಗ್ಗೆ ಕಾರಣ ತೋರಿಸಲು ಸೂಕ್ತ ಅವಕಾಶವನ್ನು ನೀಡತಕ್ಕದ್ದು.

**34. ಹಿಡುವಳಿಯ ನಿಬಂಧನೆಗಳಿಗೆ ವಿರುದ್ಧವಾಗಿ ಭೂಮಿ ಮತ್ತು ಕಟ್ಟಡಗಳ ನಿರ್ಮಾಣಕ್ಕಾಗಿ ಅಥವಾ ಬಳಕೆಗಾಗಿ ದಂಡ.–** (1) ಯಾರೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ತಾನು ಹೊಂದಿರುವಂಥ ಕಟ್ಟಡ ಅಥವಾ ಭೂಮಿಯ ನಿಬಂಧನೆಗಳಿಗೆ ವಿರುದ್ಧವಾಗಿ ಕೈಗಾರಿಕಾ ಪ್ರದೇಶ ಅಥವಾ ಕೈಗಾರಿಕಾ ಎಸ್ಟೇಟಿನಲ್ಲಿ ಯಾವುದೇ ಕಟ್ಟಡವನ್ನು ನಿರ್ಮಾಣ ಮಾಡಿದರೆ ಅಥವಾ ಮಾರ್ಪಾಟುಗೊಳಿಸಿದರೆ, ಅವನನ್ನು, ಅಪರಾಧ ನಿರ್ಣಯವಾದ ತರುವಾಯ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿಸತಕ್ಕದ್ದು.

(2) ಯಾರೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ತಾನು ಹೊಂದಿರುವಂಥ ಭೂಮಿ ಅಥವಾ ಕಟ್ಟಡದ ನಿಬಂಧನೆಗಳಿಗೆ ವಿರುದ್ಧವಾಗಿ ಅಥವಾ ಈ ಬಗ್ಗೆ ಮಾಡಲಾದ ಯಾವುವೇ ವಿನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಕೈಗಾರಿಕಾ ಎಸ್ಟೇಟಿನಲ್ಲಿ ಅಥವಾ ಕೈಗಾರಿಕಾ ಪ್ರದೇಶದಲ್ಲಿ ಯಾವುದೇ ಭೂಮಿಯನ್ನು ಅಥವಾ ಕಟ್ಟಡವನ್ನು ಬಳಸಿದಲ್ಲಿ, ಅವನು ಮೂರು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

[1][**34.ಎ. ಅನಧಿಕೃತ ನಿರ್ಮಾಣವನ್ನು ಅಥವಾ ಮಾರ್ಪಾಟನ್ನು ಕೆಡಹುವುದು ಅಥವಾ ಮಾರ್ಪಾಟು ಮಾಡುವುದು.–** (1) ಯಾರೇ ವ್ಯಕ್ತಿಯು, ಅಧಿನಿಯಮವನ್ನು ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳನ್ನು ಅಥವಾ ಯಾವುದೇ ವಿನಿಯಮವನ್ನು ಅಥವಾ ಯಾವ ಷರತ್ತಿಗೊಳಪಟ್ಟು ನಿರ್ಮಾಣ ಅಥವಾ ಮಾರ್ಪಾಟಿಗೆ ಅನುಮತಿ ನೀಡಲಾಗಿದೆಯೋ ಅವುಗಳನ್ನು ಉಲ್ಲಂಘಿಸಿ, ಯಾವುದೇ ಕಟ್ಟಡವನ್ನು ನಿರ್ಮಿಸಿದರೆ ಅಥವಾ ಮಾರ್ಪಾಟು ಮಾಡಿದರೆ ಅಥವಾ ಅಂಥ ನಿರ್ಮಾಣ ಅಥವಾ ಮಾರ್ಪಾಟುಗಳ ಮೇಲೆ ನಿರ್ಮಾಣವನ್ನು ಅಥವಾ ಮಾರ್ಪಾಟನ್ನು ಪ್ರಾರಂಭಿಸಿದರೆ ಅಥವಾ ಮಾಡಿದರೆ, ಕಾರ್ಯ ನಿರ್ವಾಹಕ ಸದಸ್ಯನು, ಈ ಅಧಿನಿಯಮದ ಅಡಿಯಲ್ಲಿ ಆ ಅಪರಾಧಿಯನ್ನು ಅಭಿಯೋಜನೆ ಮಾಡಬೇಕಾಗಿರಲಿ ಅಥವಾ ಮಾಡಬೇಕಾಗಿಲ್ಲದಿರಲಿ ನೋಟಿಸಿನ ಮೂಲಕ,–

ಎ) ಅಂಥ ನಿರ್ಮಾಣವನ್ನು ಅಥವಾ ಮಾರ್ಪಾಟನ್ನು ಏಕೆ ಕೆಡವಿಹಾಕಬಾರದು ಅಥವಾ ಮಾರ್ಪಾಟು ಮಾಡಬಾರದು ಎಂಬ ಬಗ್ಗೆ ಸಾಕಷ್ಟು ಕಾರಣಗಳನ್ನು ತೋರಿಸುವ ಒಂದು ಲಿಖಿತ ಹೇಳಿಕೆಗೆ ಸಹಿ ಮಾಡಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ ಕಾರ್ಯ ನಿರ್ವಾಹಕ ಸದಸ್ಯನಿಗೆ ಕಳುಹಿಸುವಂತೆ ಅಪರಾಧಿಯನ್ನು ಅಗತ್ಯಪಡಿಸಬಹುದು; ಅಥವಾ

(ಬಿ) ಆ ನೋಟಿಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಮತ್ತು ಅಂಥ ಸಮಯ ಹಾಗೂ ಸ್ಥಳದಲ್ಲಿ, ಕಾರ್ಯನಿರ್ವಾಹಕ ಸದಸ್ಯನ ಮುಂದೆ ಖುದ್ದಾಗಿಯಾಗಲಿ ಅಥವಾ ಅವನಿಂದ ಅಧಿಕೃತಗೊಂಡ ಏಜೆಂಟನ ಮೂಲಕವಾಗಲಿ ಹಾಜರಾಗುವಂತೆ ಮತ್ತು ಮೇಲೆ ಹೇಳಿದ ಕಾರಣ ತೋರಿಸುವಂತೆ ಅಪರಾಧಿಯನ್ನು ಅಗತ್ಯಪಡಿಸಬಹುದು.

(2) ಯಾವ ವ್ಯಕ್ತಿಗೆ ನೋಟಿಸನ್ನು ಜಾರಿ ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯು, ಆ ನಿರ್ಮಾಣವನ್ನು ಅಥವಾ ಮಾರ್ಪಾಟನ್ನು ಹಾಗೆ ಏಕೆ ಕೆಡವಿಹಾಕಬಾರದು ಅಥವಾ ಮಾರ್ಪಾಟುಗೊಳಿಸಬಾರದು ಎಂಬ ಬಗ್ಗೆ ಕಾರ್ಯ ನಿರ್ವಾಹಕ ಸದಸ್ಯನಿಗೆ ಮನದಟ್ಟಾಗುವಂತೆ ಸಾಕಷ್ಟು ಕಾರಣಗಳನ್ನು ತೋರಿಸಲು ವಿಫಲನಾದಲ್ಲಿ, ಕಾರ್ಯನಿರ್ವಾಹಕ ಸದಸ್ಯನು, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಎರಡು ತಿಂಗಳನ್ನು ಮೀರದಂಥ ಅವಧಿಯೊಳಗೆ ಹಾಗೆ ಕೆಡವಿಹಾಕಲು ಅಥವಾ ಮಾರ್ಪಾಟು ಮಾಡಲು ನಿರ್ದೇಶಿಸುವ ಒಂದು ಆದೇಶವನ್ನು ಹೊರಡಿಸಬಹುದು.

(3) ಯಾವ ವ್ಯಕ್ತಿಯ ವಿರುದ್ಧ (2)ನೇ ಉಪಪ್ರಕರಣದ ಅಡಿಯಲ್ಲಿ ಕೆಡವಿಹಾಕುವ ಅಥವಾ ಮಾರ್ಪಾಟುಗೊಳಿಸುವ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯು ಸದರಿ ಆದೇಶವನ್ನು ಪಾಲಿಸಲು ತಪ್ಪಿದಲ್ಲಿ, ಕಾರ್ಯನಿರ್ವಾಹಕ ಸದಸ್ಯನು, ಹಾಗೆ ಕೆಡವಿಸಬಹುದು ಅಥವಾ ಮಾರ್ಪಾಟುಗೊಳಿಸಬಹುದು ಮತ್ತು ಅದಕ್ಕೆ ತಗುಲಿದ ವೆಚ್ಚಗಳನ್ನು, ಸಂಬಂಧಿಸಿದ ವ್ಯಕ್ತಿಯಿಂದ ಭೂ ಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದೆಂದು ಆದೇಶ ಹೊರಡಿಸಬಹುದು.

(4) ಸಂಬಂಧಿಸಿದ ವ್ಯಕ್ತಿಗೆ, ಕೆಡವಿಹಾಕಿದ್ದಕ್ಕಾಗಿ ಅಥವಾ ಮಾರ್ಪಾಟು ಮಾಡಿದ್ದಕ್ಕಾಗಿ ವಹಿಸಿದ ವೆಚ್ಚಗಳನ್ನು ಭೂ ಕಂದಾಯದ ಬಾಕಿಯಂತೆ ಏಕೆ ವಸೂಲಿ ಮಾಡಬಾರದು ಎಂಬ ಬಗ್ಗೆ ಕಾರಣ ಕೇಳುವ ನೋಟಿಸಿನ ಮೂಲಕ ಅಗತ್ಯಪಡಿಸಿದ ಹೊರತು ಮತ್ತು ತನ್ನ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ಹೊರತು (3)ನೇ ಉಪ ಪ್ರಕರಣದ ಅಡಿಯಲ್ಲಿ ಆ ವೆಚ್ಚಗಳನ್ನು ಹಾಗೆ ವಸೂಲಿ ಮಾಡುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(5) (2)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸದರಿ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಮಂಡಳಿಗೆ ಅಪೀಲನ್ನು ಸಲ್ಲಿಸಬಹುದು. ಮತ್ತು ಮಂಡಳಿಯು ಅಪೀಲಿನ ಪಕ್ಷಕಾರರ ಅಹವಾಲನ್ನು ಕೇಳಿದ ತರುವಾಯ ಅಪೀಲನ್ನು ಪುರಸ್ಕರಿಸಬಹುದು ಅಥವಾ ವಜಾಗೊಳಿಸಬಹುದು ಅಥವಾ ಸದರಿ ಆದೇಶದ ಯಾವುದೇ ಭಾಗವನ್ನು ವ್ಯತ್ಯಸ್ತಗೊಳಿಸಬಹುದು.

(6) (3)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಆದೇಶದಿಂದ ಬಾಧಿತನಾಗಿರುವ ಯಾರೇ ವ್ಯಕ್ತಿಯು, ವೆಚ್ಚಗಳೆಂದು ವಸೂಲು ಮಾಡಲು ಆದೇಶಿಸಿದ ಮೊತ್ತದ ಪರಿಮಾಣದ ಸಂಬಂಧದಲ್ಲಿ ಸದರಿ ಆದೇಶದ ಮೂರು ತಿಂಗಳ ಒಳಗಾಗಿ ದಾವೆಯನ್ನು ಹೂಡಬಹುದು. ಸದರಿ ಮೂರು ತಿಂಗಳ ಅವಧಿಯನ್ನು ಲೆಕ್ಕ ಹಾಕುವಾಗ ಆ ಆದೇಶದ ಪ್ರತಿಯನ್ನು ಪಡೆಯಲು ಅಗತ್ಯವಾದ ಕಾಲವನ್ನು ಹೊರತುಪಡಿಸತಕ್ಕದ್ದು.

(7) (3)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಆದೇಶಕ್ಕನುಸಾರವಾಗಿ ವಸೂಲಿ ಮಾಡಬೇಕಾದ ಸಂಪೂರ್ಣ ಮೊತ್ತವನ್ನು ಪಾವತಿ ಮಾಡಿರುವ ಅಥವಾ ಠೇವಣಿ ಇಟ್ಟಿರುವ ಬಗ್ಗೆ ರಸೀದಿಯನ್ನು ವಾದಿಯು ಹಾಜರುಪಡಿಸಿದ ಹೊರತು ಯಾವುದೇ ನ್ಯಾಯಾಲಯವು, ಅಂಥ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ. ದಾವೆಯ ಫಲಿತಾಂಶಕ್ಕೊಳಪಟ್ಟು (3)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಆದೇಶವು ಅಂತಿಮವಾಗಿರತಕ್ಕದ್ದು.

(8) (3)ನೇ ಉಪಪ್ರಕರಣದ ಅಡಿಯಲ್ಲಿನ ಆದೇಶದ ಒಂದು ಪ್ರತಿಯನ್ನು ಅಥವಾ ತೀರ್ಪಿನ ಒಂದು ಪ್ರತಿಯನ್ನು ಅಥವಾ ಸಂದರ್ಭಾನುಸಾರ ಅವೆರಡನ್ನೂ, ಅಧಿಕಾರ ವ್ಯಾಪ್ತಿ ಹೊಂದಿರುವ ಜಿಲ್ಲಾಧಿಕಾರಿಗೆ ಕಳುಹಿಸತಕ್ಕದ್ದು. ಅವನು ಆ ತರುವಾಯ ಸಂಬಂಧಿಸಿದ ವ್ಯಕ್ತಿಯಿಂದ ಆ ಮೊತ್ತವನ್ನು ಭೂ ಕಂದಾಯದ ಬಾಕಿಯೆಂಬಂತೆ ವಸೂಲಿ ಮಾಡಲು ಮುಂದುವರೆಯತಕ್ಕದ್ದು.][1]

1. 34ಎ ಪ್ರಕರಣವನ್ನು 1978ರ ಅಧಿನಿಯಮ 27ರ ಮೂಲಕ ದಿನಾಂಕ 18.10.1978ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][34ಬಿ. **ಅಧಿಕಾರವಿಲ್ಲದೆ ಗುತ್ತಿಗೆಯ ಅಥವಾ ಹಿಡುವಳಿಯ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ವಾಸದ ಮನೆಗಳೂ ಸೇರಿದಂತೆ ಆವರಣಗಳನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳುವುದು.–** (1) ಒಂದು ಕೈಗಾರಿಕಾ ಪ್ರದೇಶ ಅಥವಾ ಕೈಗಾರಿಕಾ ಎಸ್ಟೇಟಿನಲ್ಲಿರುವ ಯಾವುದೇ

ಆವರಣದ ಅಥವಾ ಅದರ ಭಾಗದ ಅಥವಾ ವಾಸದ ಮನೆಯ ಹಂಚಿಕೆದಾರನು ಯಾರೇ ಹಂಚಿಕೆಯ ಯಾವುವೇ ನಿಬಂಧನೆಗಳು ಅಥವಾ ಷರತ್ತುಗಳನ್ನು ಉಲ್ಲಂಘಿಸಿದ್ದಾನೆಂದು ಅಥವಾ ಯಾವುದೇ ಅಧಿಕಾರವಿಲ್ಲದೆ ಅದನ್ನು ಧಾರಣಮಾಡಿರುವನೆಂದು ಮಂಡಳಿಯು ಅಭಿಪ್ರಾಯಪಟ್ಟಲ್ಲಿ, 25ನೇ ಪ್ರಕರಣಕ್ಕೆ ಬಾಧಕವಾಗದಂತೆ, ಮಂಡಳಿಯು, ಅಂಥ ಹಂಚಿಕೆದಾರ ಮತ್ತು ಮಂಡಲಿಯು ಯಾರ ಪರವಾಗಿ ಬ್ಯಾಂಕುಗಳಿಗೆ ಅಥವಾ ಹಣಕಾಸು ಸಂಸ್ಥೆಗಳಿಗೆ, ಆವರಣಗಳು ಅಥವಾ ವಾಸದ ಮನೆಗಳನ್ನು ಅಡಮಾನ ಮಾಡಲು ಅಥವಾ ಹಕ್ಕುಗಳನ್ನು ಗುತ್ತಿಗೆ ನೀಡಲು ಅನುಮತಿಸಿದೆಯೋ ಅಂಥ ಬ್ಯಾಂಕುಗಳಿಗೆ ಅಥವಾ ಹಣಕಾಸು ಸಂಸ್ಥೆಗಳಿಗೆ ಹಂಚಿಕೆಯ ನಿಬಂಧನೆಗಳ ಮತ್ತು ಷರತ್ತುಗಳ ಉಲ್ಲಂಘನೆಯ ಬಗ್ಗೆ ನಿರ್ದಿಷ್ಟಪಡಿಸಿ, ಮತ್ತು ನೋಟೀಸಿನಲ್ಲಿ ಗೊತ್ತು ಪಡಿಸಲಾದ ಅವಧಿಯೊಳಗಾಗಿ ಅಂಥ ಉಲ್ಲಂಘನೆಗಳನ್ನು ಪರಿಹರಿಸುವಂತೆ ಹಂಚಿಕೆದಾರನನ್ನು ಕೋರುವ ನೋಟಿಸನ್ನು ನೀಡಬಹುದು.

(2) ಹಾಗೆ ಗೊತ್ತುಪಡಿಸಲಾದ ಅವಧಿಯೊಳಗೆ ಉಲ್ಲಂಘನೆಗಳನ್ನು ಪರಿಹರಿಸಲು ಹಂಚಿಕೆ ಪಡೆದವನು ತಪ್ಪಿದಲ್ಲಿ, ಮಂಡಳಿಯು, ಅಂಥ ಬ್ಯಾಂಕು ಅಥವಾ ಹಣಕಾಸು ಸಂಸ್ಥೆಗಳಿಗೆ ಮಾಹಿತಿ ನೀಡಿ, ಆವರಣ ಅಥವಾ ಅದರ ಭಾಗ ಅಥವಾ ವಾಸದ ಮನೆಯ ಸ್ವಾಧೀನವನ್ನು ಪುನಃ ಹಿಂದಕ್ಕೆ ಏಕೆ ಪಡೆಯಬಾರದು ಎಂಬ ಬಗ್ಗೆ ನೋಟಿಸನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕಾರಣ ತೋರಿಸುವಂತೆ ಹಂಚಿಕೆದಾರನಿಗೆ ಒಂದು ನೋಟೀಸು ಜಾರಿಮಾಡತಕ್ಕದ್ದು.

(3) ಹಂಚಿಕೆದಾರನು ಕಾರಣವೇನಾದರೂ ಇದ್ದು ಅದನ್ನು ತೋರಿಸಿದಲ್ಲಿ, ಅದನ್ನು ಪರಿಗಣಿಸಿದ ನಂತರ ಮತ್ತು ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶ ನೀಡಿದ ತರುವಾಯ ಮಂಡಲಿಯು ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸಬಹುದು.

(4) ಮಂಡಳಿಯು, (3)ನೇ ಉಪಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವಲ್ಲಿ ಕೈಗಾರಿಕಾ ಪ್ರದೇಶದಲ್ಲಿನ ಆವರಣವನ್ನು ಅಥವಾ ಅದರ ಭಾಗವನ್ನು ಅಥವಾ ವಾಸದ ಮನೆಯನ್ನು ಪುನಃ ಸ್ವಾಧೀನ ಪಡಿಸಿಕೊಳ್ಳುವುದಕ್ಕಾಗಿ, ಲಿಖಿತ ನೋಟಿಸಿನ ಮೂಲಕ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ, ಮಂಡಳಿಗೆ ಅಥವಾ ಈ ಸಂಬಂಧದಲ್ಲಿ ಯುಕ್ತವಾಗಿ ಅಧಿಕೃತಗೊಳಿಸಲಾದ ಯಾರೇ ವ್ಯಕ್ತಿಗೆ ಅದರ ಸ್ವಾಧೀನವನ್ನು ಅಧ್ಯರ್ಪಿಸುವಂತೆ ಮತ್ತು ಒಪ್ಪಿಸುವಂತೆ ಯಾರೇ ಹಂಚಿಕೆ ಪಡೆದವನಿಗೆ ಆದೇಶಿಸಬಹುದು.

(5) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆವರಣ ಅಥವಾ ಅದರ ಭಾಗ ಅಥವಾ ವಸತಿಗೃಹ ಸ್ವಾಧೀನವನ್ನು ಅಧ್ಯರ್ಪಿಸಲು ಅಥವಾ ಒಪ್ಪಿಸಲು ಯಾರೇ ಹಂಚಿಕೆದಾರನು ನಿರಾಕರಿಸಿದಲ್ಲಿ, ಮಂಡಳಿಯು ಅಥವಾ ಈ ಸಂಬಂಧದಲ್ಲಿ ಅದು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಎಲ್ಲ ಪೂರ್ವಾಧಿಗಳಿಂದ ಮುಕ್ತವಾದ ಆವರಣ ಅಥವಾ ಅದರ ಭಾಗ ಅಥವಾ ವಸತಿಗೃಹವನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಈ ಉದ್ದೇಶಕ್ಕಾಗಿ ಅಗತ್ಯವಿರಬಹುದಾದ ಬಲವನ್ನು ಪ್ರಯೋಗಿಸಬಹುದು.][1]

1. 2000ದ ಅಧಿನಿಯಮ 19 ರ ಮೂಲಕ ದಿನಾಂಕ 25.5.2000 ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**35. ಪ್ರವೇಶಾಧಿಕಾರಗಳು.–** ರಾಜ್ಯ ಸರ್ಕಾರದ ಯಾರೇ ಅಧಿಕಾರಿಯು, ಮಂಡಳಿಯ ಯಾರೇ ಸದಸ್ಯ ಮತ್ತು ಈ ಬಗ್ಗೆ ಮಂಡಳಿಯು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು,–

(ಎ) ಯಾವುದೇ ತಪಾಸಣೆ, ಸರ್ವೆ, ಅಳತೆ, ಮೌಲ್ಯ ನಿರ್ಧರಣೆ ಅಥವಾ ವಿಚಾರಣೆಯನ್ನು ಮಾಡುವ;

(ಬಿ) ನಿರ್ಮಾಣದ ಹಂತದಲ್ಲಿರುವ ಕಾಮಗಾರಿಗಳನ್ನು ತಪಾಸಣೆ ಮಾಡುವ ಮತ್ತು ಅಳತೆ ಮಾಡುವ;

(ಸಿ) ಈ ಅಧಿನಿಯಮದ ದಕ್ಷ ನಿರ್ವಹಣೆಗೆ ಅಗತ್ಯವಿರುವ ಯಾವುವೇ ಇತರೆ ಕಾರ್ಯಗಳನ್ನು ಮಾಡುವ

– ಉದ್ದೇಶಕ್ಕಾಗಿ, ಸಹಾಯಕರು ಅಥವಾ ಕೆಲಸಗಾರರ ನೆರವಿನೊಂದಿಗೆ ಅಥವಾ ನೆರವಿಲ್ಲದೆ ಯಾವುದೇ ಭೂಮಿ ಅಥವಾ ಕಟ್ಟಡದೊಳಗೆ ಅಥವಾ ಅದನ್ನು ಪ್ರವೇಶಿಸಬಹುದು :

ಪರಂತು, ಸೂರ್ಯೋದಯದ ಮತ್ತು ಸೂರ್ಯಾಸ್ತದ ನಡುವಿನ ಅವಧಿಯನ್ನು ಹೊರತುಪಡಿಸಿ ಮತ್ತು ಅಧಿಭೋಗದಾರನಿಗೆ ಅಥವಾ ಯಾರೇ ಅಧಿಭೋಗದಾರನು ಇಲ್ಲದಿದ್ದಲ್ಲಿ, ಭೂಮಿಯ ಅಥವಾ ಕಟ್ಟಡದ ಮಾಲೀಕನಿಗೆ ಯುಕ್ತ ನೋಟೀಸು ನೀಡಿದ ಹೊರತು ಅಂಥ ಯಾವುದೇ ಪ್ರವೇಶವನ್ನು ಮಾಡತಕ್ಕದ್ದಲ್ಲ.

**36. ಮಂಡಳಿಗೆ ಬರಬೇಕಾಗಿರುವ ಮೊತ್ತಗಳನ್ನು ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡುವುದು.–** ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ಮಂಡಳಿಗೆ ಯಾರೇ ವ್ಯಕ್ತಿಯಿಂದ ಸಂದಾಯವಾಗಬೇಕಿರುವ ಅಥವಾ ಮಂಡಳಿಯು ವಸೂಲಿ ಮಾಡಬಹುದಾದ ಎಲ್ಲ ಮೊತ್ತಗಳನ್ನು ಅಥವಾ ಆ ಸಂಬಂಧದಲ್ಲಿ ತಗುಲಿದ ಎಲ್ಲ ಚಾರ್ಜುಗಳು ಅಥವಾ ಎಲ್ಲ ವೆಚ್ಚಗಳನ್ನು ವಸೂಲಿಯ ಯಾವುದೇ ಇತರ ರೀತಿಗೆ ಬಾಧಕವಾಗದಂತೆ, ಮಂಡಳಿಗೆ ಅನ್ವಯವಾಗುವ ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡತಕ್ಕದ್ದು.

**37. ಪ್ರದೇಶ ಅಥವಾ ಎಸ್ಟೇಟು ಅಥವಾ ಅದರ ಭಾಗವನ್ನು ಹಿಂತೆಗೆದುಕೊಳ್ಳುವುದು.–** ಯಾವುದೇ ಕೈಗಾರಿಕಾ ಪ್ರದೇಶ ಅಥವಾ ಅದರ ಯಾವುದೇ ಭಾಗದ ಸಂಬಂಧದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಯಾವ ಉದ್ದೇಶಕ್ಕಾಗಿ ಮಂಡಳಿಯನ್ನು ಸ್ಥಾಪಿಸಲಾಗಿತ್ತೋ ಆ ಉದ್ದೇಶವನ್ನು, ಅಂಥ ಪ್ರದೇಶವು ಅಥವಾ ಅದರ ಭಾಗವು ಮಂಡಳಿಯ ಅಡಿಯಲ್ಲಿ ಮುಂದುವರೆಯುತ್ತಾ ಇರುವುದು ಅನಗತ್ಯವೆನಿಸುವಷ್ಟರ ಮಟ್ಟಿಗೆ ಗಣನೀಯವಾಗಿ ಸಾಧಿಸಲಾಗಿದೆಯೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಅಂಥ ಪ್ರದೇಶವನ್ನು ಅಥವಾ ಅದರ ಭಾಗವನ್ನು ಮಂಡಳಿಯ ಅಧಿಕಾರ ವ್ಯಾಪ್ತಿಯಿಂದ ತೆಗೆದುಹಾಕಲಾಗಿದೆಯೆಂದು ಘೋಷಿಸಬಹುದು. ರಾಜ್ಯ ಸರ್ಕಾರವು, ಅಂಥ ಪ್ರದೇಶದ ಅಥವಾ ಅದರ ಭಾಗದ ನಿರ್ವಹಣೆಗಾಗಿ ಸಂದರ್ಭಗಳು ಅಗತ್ಯಪಡಿಸುವಂಥ ಪ್ರಾಸಂಗಿಕವಾದ ಇತರ ಏರ್ಪಾಡುಗಳನ್ನು ಸಹ ಮಾಡಬಹುದು.

**38. ಅಭಿಯೋಜನೆಯ ಅಧಿಕಾರ.–** ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದ ಹೊರತು, ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ, ಮಂಡಲಿಗೆ ಸೇರಿರುವ ಅಥವಾ ಅದರಲ್ಲಿ ನಿಹಿತವಾಗಿರುವ ಸ್ವತ್ತಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು, ಮಂಡಳಿಯು ಅಥವಾ ಇದರ ಪರವಾಗಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಮಂಡಳಿಯು ಅಧಿಕಾರ ನೀಡಿದ ಯಾರೇ ವ್ಯಕ್ತಿಯು ಕೊಟ್ಟ ದೂರಿನ ಮೇಲೆ ಹೊರತು ಅಥವಾ ಮಂಡಳಿಯಿಂದ ಅಥವಾ ಅವನಿಂದ ಸ್ವೀಕರಿಸಿದ ಮಾಹಿತಿಯ ಮೇಲೆ ಹೊರತು, ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**39. ಅಡ್ಡಿಯುಂಟು ಮಾಡಿದ್ದಕ್ಕಾಗಿ ದಂಡ.–** ಯಾವುದೇ ಭೂಮಿ ಅಥವಾ ಕಟ್ಟಡದೊಳಗೆ ಅಥವಾ ಅದನ್ನು ಪ್ರವೇಶಿಸಲು 35ನೇ ಪ್ರಕರಣದ ಅಡಿಯಲ್ಲಿ ಅಧಿಕೃತವಾದ ವ್ಯಕ್ತಿಯ ಪ್ರವೇಶಕ್ಕೆ ಅಡ್ಡಿಪಡಿಸುವ ಅಥವಾ ಅಂಥ ಪ್ರವೇಶದ ನಂತರ ಅಂಥ ವ್ಯಕ್ತಿಗೆ ಉಪದ್ರವ ನೀಡುವ ಅಥವಾ ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ಪ್ರದತ್ತವಾದ ಯಾವುದೇ ಅಧಿಕಾರವನ್ನು ಅವನು ಕಾನೂನುಬದ್ಧವಾಗಿ ಚಲಾಯಿಸುವುದಕ್ಕೆ ಅಡ್ಡಿಯುಂಟು ಮಾಡುವ ಯಾರೇ ವ್ಯಕ್ತಿಯನ್ನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿಸತಕ್ಕದ್ದು.

**40. ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:–

(ಎ) 7ನೇ ಪ್ರಕರಣದ ಅಡಿಯಲ್ಲಿ ಮಂಡಳಿಯ ಸದಸ್ಯರ ಪ್ರತಿಫಲ ಭತ್ಯೆ;

(ಬಿ) 20ನೇ ಪ್ರಕರಣದ ಅಡಿಯಲ್ಲಿ ಮಂಡಳಿಯು ಯಾವ ಷರತ್ತುಗಳಿಗೊಳಪಟ್ಟು ಸಾಲ ಪಡೆಯಬಹುದೋ ಆ ಷರತ್ತುಗಳು;

(ಸಿ) 22ನೇ ಪ್ರಕರಣದ ಅಡಿಯಲ್ಲಿ ವಾರ್ಷಿಕ ಹಣಕಾಸು ವಿವರಪತ್ರ ಮತ್ತು ವಾರ್ಷಿಕ ಕಾರ್ಯಕ್ರಮಗಳನ್ನು ಸಿದ್ಧಪಡಿಸುವ ನಮೂನೆ ಮತ್ತು ರೀತಿ;

(ಡಿ) 24ನೇ ಪ್ರಕರಣದ ಅಡಿಯಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸುವ ರೀತಿ ಮತ್ತು ನಮೂನೆ ಹಾಗೂ ವಾರ್ಷಿಕ ವರದಿಯ ನಮೂನೆ ಮತ್ತು ರೀತಿ;

(ಇ) 31ನೇ ಪ್ರಕರಣದ ಮೇರೆಗೆ ಸರ್ಕಾರದ ಅಧಿಕಾರಗಳ ಪ್ರತ್ಯಾಯೋಜನೆ;

(ಎಫ್) ಮಂಡಳಿಯು ವಿಧಿಸಬಹುದಾದಂಥ ಫೀಜುಗಳು;

(ಜಿ) ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**41. ವಿನಿಯಮಗಳ ರಚನಾಧಿಕಾರ.–** (1) ಮಂಡಳಿಯು, ರಾಜ್ಯ ಸರ್ಕಾರದ ಪೂರ್ವಾನುಮೋದನೆ ಪಡೆದು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿ, ಈ ಅಧಿನಿಯಮ ಮತ್ತು ಅದರ ಅಡಿಯಲ್ಲಿ ರಚಿಸಲಾಗಿರುವ ನಿಯಮಗಳಿಗೆ ಸುಸಂಗತವಾಗಿರುವ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮಗಳನ್ನು ಈ ಮುಂದಿನವುಗಳಿಗಾಗಿ ಉಪಬಂಧಿಸಬಹುದು,–

(ಎ) 8ನೇ ಪ್ರಕರಣದ ಅಡಿಯಲ್ಲಿ ಮಂಡಳಿ ಸಭೆಯ ಕಾಲ ಮತ್ತು ಸ್ಥಳ ಮತ್ತು ಅಂಥ ಸಭೆಯಲ್ಲಿ ವ್ಯವಹಾರ ನಿರ್ವಹಣೆಯ ಸಂಬಂಧದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ;

(ಬಿ) ಯಾವ ನಿಬಂಧನೆಗಳು ಮತ್ತು ಷರತ್ತುಗಳ ಅಡಿಯಲ್ಲಿ ಮಂಡಳಿಯು ಭೂಮಿಯನ್ನು ವಿಲೆ ಮಾಡಬಹುದೋ ಆ ನಿಬಂಧನೆಗಳು ಮತ್ತು ಷರತ್ತುಗಳು;

(ಸಿ) ವಿನಿಯಮಗಳ ಮೂಲಕ ಉಪಬಂಧಿಸಬೇಕಾದ, ಅಥವಾ ಉಪಬಂಧಿಸಬಹುದಾದ ಯಾವುವೇ ಇತರ ವಿಷಯಗಳು.

**42. ನಿಯಮಗಳು ಮತ್ತು ವಿನಿಯಮಗಳನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸುವುದು.–** ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನದ ಅಥವಾ ನಿಕಟೋತ್ತರದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮ ಅಥವಾ ವಿನಿಯಮವನ್ನು ಮಾರ್ಪಾಟು ಮಾಡಬಾರದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮ ಅಥವಾ ವಿನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**43. ಸ್ಟಾಂಪು ಸುಂಕ ಮತ್ತು ಫೀಜುಗಳ ವಿನಾಯಿತಿ.–** ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮ ಅಥವಾ ವಿನಿಯಮದ ಅಡಿಯಲ್ಲಿ ನೀಡಲಾದ ಯಾವುದೇ ಐತೀರ್ಪು ಅಥವಾ ಮಾಡಿಕೊಳ್ಳಲಾದ ಯಾವುದೇ ಒಪ್ಪಂದ ಅಥವಾ ಬರೆದುಕೊಡಲಾದ ಯಾವುದೇ ಕರಾರು ಇವುಗಳಿಗೆ,

[1][ಕರ್ನಾಟಕ][1] ಸ್ಟಾಂಪು ಅಧಿನಿಯಮ, 1957ರ ಅಡಿಯಲ್ಲಿನ ಸುಂಕವನ್ನು ಅಥವಾ ಭಾರತ ನೋಂದಣಿ ಅಧಿನಿಯಮ, 1908ರ ಅಡಿಯಲ್ಲಿನ ಫೀಜುಗಳನ್ನು ವಿಧಿಸತಕ್ಕದ್ದಲ್ಲ.

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ ದಿನಾಂಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**44. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಅಡಿಯಲ್ಲಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಆ ಕಂಪನಿಯನ್ನು ಮತ್ತು ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವಲ್ಲಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಅಂಥ ಅಪರಾಧವು ತನ್ನ ಅರಿವಿಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯಥೋಚಿತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತು ಪಡಿಸಿದರೆ, ಈ ಉಪ ಪ್ರಕರಣದಲ್ಲಿ ಅಡಕವಾಗಿರುವ ಯಾವುದೂ ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಈ ಅಧಿನಿಯಮದ ಅಡಿಯಲ್ಲಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಅಂಥ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅವರ ಯಾವುದೇ ನಿರ್ಲಕ್ಷತೆಯಿಂದಾಗಿ ನಡೆಯಿತೆಂದು ಆರೋಪಿಸಬಹುದಾದಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಒಂದು ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುಗಾರ.

**45. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿತವಾದ ಯಾವುದೇ ನಿಯಮದ ಅಥವಾ ವಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ರಾಜ್ಯ ಸರ್ಕಾರದ ಅಥವಾ ಮಂಡಳಿಯ ಯಾರೇ ಅಧಿಕಾರಿಯ ವಿರುದ್ಧ, ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆ ಹೂಡಲು ಅವಕಾಶವಿರತಕ್ಕದ್ದಲ್ಲ.

**46. ಮಂಡಳಿಯ ನೌಕರರು ಲೋಕ ನೌಕರರಾಗಿರುವುದು.–** ಮಂಡಳಿಯ ಎಲ್ಲ ಸದಸ್ಯರು ಮತ್ತು ನೌಕರರು, ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅನುಸರಿಸಿ ಕಾರ್ಯ ನಿರ್ವಹಿಸುವಾಗ ಅಥವಾ ಕಾರ್ಯ ನಿರ್ವಹಿಸುತ್ತಿರುವರೆಂದು ತಾತ್ಪರ್ಯವಾಗುವಾಗ ಅವರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**47. ಇತರ ಕಾನೂನುಗಳಿಗೆ ಅಸಂಗತವಾಗಿರುವ ಉಪಬಂಧಗಳ ಪರಿಣಾಮ.–** ಈ ಅಧಿನಿಯಮದ ಉಪಬಂಧಗಳು ಯಾವುದೇ ಇತರ ಕಾನೂನಿನಲ್ಲಿ ಇದಕ್ಕೆ ಅಸಂಗತವಾದುದು ಏನೇ ಇದ್ದಾಗ್ಯೂ ಪರಿಣಾಮಕಾರಿಯಾಗತಕ್ಕದ್ದು.

**48. ಸಂದೇಹಗಳು ಮತ್ತು ತೊಂದರೆಗಳನ್ನು ನಿವಾರಿಸುವ ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ಸಂದೇಹ ಅಥವಾ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆ ಹೊರಡಿಸಿ, ಆ ಸಂದೇಹ ಅಥವಾ ತೊಂದರೆಯ ನಿವಾರಣೆಗಾಗಿ ತನಗೆ ಅವಶ್ಯ ಅಥವಾ ವಿಹಿತವೆಂದು ಕಂಡು ಬರಬಹುದಾದಂಥ ಉಪಬಂಧಗಳನ್ನು ರಚಿಸಬಹುದು ಅಥವಾ ಈ ಅಧಿನಿಯಮದ ವ್ಯಕ್ತ ಉಪಬಂಧಗಳಿಗೆ ಅಸಂಗತವಾಗಿಲ್ಲದ ನಿರ್ದೇಶನವನ್ನು ನೀಡಬಹುದು ಮತ್ತು ಅಂಥ ಪ್ರತಿಯೊಂದು ಅಧಿಸೂಚನೆಯು, ಈ ಅಧಿನಿಯಮದಲ್ಲಿ ಅಧಿನಿಯಮಿತಗೊಳಿಸಿದ್ದರೆ ಹೇಗೋ ಹಾಗೆ ಪರಿಣಾಮ ಹೊಂದಿರತಕ್ಕದ್ದು.

* * *

**ಅಧಿಸೂಚನೆ**

**ಟಿಪ್ಪಣಿ:** ಒಂದು ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲು ನಿರ್ಧಾರವನ್ನು ಕೈಗೊಂಡು ಮತ್ತು ಆ ಉದ್ದೇಶಕ್ಕಾಗಿ ಆ ಪ್ರದೇಶದಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಾಗಲೆಲ್ಲ ಆ ಪ್ರದೇಶದಲ್ಲಿ VIIನೇ ಅಧ್ಯಾಯವನ್ನು ಜಾರಿಗೆ ತರಲಾಗಿದೆ. ಆ ಪ್ರದೇಶಗಳ ಸರ್ವೆ ಸಂಖ್ಯೆಗಳನ್ನು ನಿರ್ದಿಷ್ಟಪಡಿಸಿ ಅಂಥ ಅನೇಕ ಅಧಿಸೂಚನೆಗಳನ್ನು ಅಪಾರ ಸಂಖ್ಯೆಯಲ್ಲಿ ಹೊರಡಿಸಲಾಗಿದೆ. ಆ ಅಧಿಸೂಚನೆಗಳ ಅಧಿಕ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಇಲ್ಲಿ ಪ್ರಕಟಿಸಿಲ್ಲ.

**2022 ರ ಕರ್ನಾಟಕ ಅಧಿನಿಯಮ ಸಂಖ್ಯೆ: 20**

(2022 ರ ಏಪ್ರಿಲ್ ತಿಂಗಳ 5ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ಅಧಿನಿಯಮ, 2022**

(2022 ರ ಏಪ್ರಿಲ್ ತಿಂಗಳ 4ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966ನ್ನು (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 18) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 30ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966ರ (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 18) 30ನೇ ಪ್ರಕರಣದ ಬದಲಿಗೆ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"30. 2013ರ ಕೇಂದ್ರ ಅಧಿನಿಯಮ 30ರ ಅನ್ವಯ.-** ಭೂ ಸ್ವಾಧೀನ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಯಲ್ಲಿ ನ್ಯಾಯೋಚಿತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013ರ (2013ರ ಕೇಂದ್ರ

ಅಧಿನಿಯಮ 30) 23, 23ಎ, 26, 27, 28, 29, 30, 64, 65, 69, 72, 73, 74, 75, 76, 77, 78, 79, 80, 96ನೇ ಪ್ರಕರಣಗಳು ಮತ್ತು ಅನುಸೂಚಿ-1, ಆ ಉದ್ದೇಶಕ್ಕಾಗಿ, ಈ ಅಧ್ಯಾಯದ ಅಡಿಯಲ್ಲಿ ಸ್ವಾದೀನಪಡಿಸಿಕೊಳ್ಳಲಾದ ಜಮೀನುಗಳ ಸಂಬಂಧದಲ್ಲಿ ಅವುಗಳನ್ನು ಅದರ ಭಾಗವಾಗಿ ಮರು ಅಧಿನಿಯಮಿತಗೊಳಿಸಲಾಗಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಈ ಅಧಿನಿಯಮದ ಭಾಗವಾಗಿರುತ್ತವೆ ಎಂದು ಭಾವಿಸತಕ್ಕದ್ದು."

The above translation of the Karnataka Industrial Area Development (Amendment) Act, 2022 (Karnataka Act 20 of 2022) shall be authoritative text in Kannada language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.